ಇದರ ಬಗ್ಗೆ ಚರ್ಚೆಯಾಗಬೇಕು; ಇಲ್ಲದಿದ್ದರೆ ನಾವು ಶಾಸಕರಾಗಿ ಹೇಗೆ ಕೆಲಸ ಮಾಡಲು ಸಾಧ್ಯ; ಹೇಗೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಲು ಸಾಧ್ಯ?

ಹಕ್ಕುಚ್ಯುತಿ ನಿರ್ಣಯ

ಅಧ್ಯಕ್ಷರು : ದಯಮಾಡಿ ವಿರೋಧ ಪಕ್ಷದ ನಾಯಕರು ನಮ್ಮೊಂದಿಗೆ ಸಹಕರಿಸಬೇಕು. ಈಗ ನಾಗೇಗೌಡರು ಮಾತನಾಡುತ್ತಾರೆ.

+ ಶ್ರೀ ಕೆ.ಎನ್. ನಾಗೇಗೌಡ : ನಾವು ನಿಯಮಾವಳಿಗಳ ಪ್ರಕಾರ ಕಳುಹಿಸಿದ ಪ್ರಿವಿಲೇಜ್ ಮೋಷನ್‌ಗೆ ತಾವು ಆದ್ಯತೆ ಕೊಟ್ಟಿದ್ದೀರಿ ಎಂದು ಭಾವಿಸಿ ನಿಯಮಾವಳಿ 27 ಮತ್ತು 191ರ ಪ್ರಕಾರ ನಾನು ಹಾಗೂ ಶ್ರೀ ಉದಾಸಿರವರು, ಶ್ರೀ ವಿ. ಸೋಮಣ್ಣರವರು, ಶ್ರೀ ಶಿವಕುಮಾರ್‌ರವರು ನಾಲ್ಕು ಜನರು ಕೂಡಿ ತಮಗೆ ನೋಟಿಸ್ ಕಳುಹಿಸಿ ಕೊಟ್ಟಿದ್ದೇವೆ. ಆ ನೋಟಿಸಿನ ಅನ್ವಯ ಮತ್ತು ವಿಧಾನ ಸಭೆ ನಿಯಮಾವಳಿಗಳ ನಿಯಮ 27 ಮತ್ತು 191 ರ ಪ್ರಕಾರ ಮತ್ತು ಸದನ ಹೊಂದಿರುವ ಸ್ವಯಂ ಅಧಿಕಾರಕ್ಕೆ ಒಳಪಟ್ಟ ಈ ಕೆಳಕಂಡ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದೀರೆಂದು ನಂಬಿರುತ್ತೇನೆ.

ದಿನಾಂಕ 20-03-95 ರಂದು ಮಾನ್ಯ ರಾಜ್ಯಪಾಲರು ಜಂಟೀ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಸದನದ ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜ್‌ರವರು ಸದನದ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಅನುಚಿತವಾದ ರೀತಿಯಲ್ಲಿ ವರ್ತಿಸಿರುವುದು ಸಭೆಯ ಘನತೆಗೆ ಮತ್ತು ಗಂಭೀರ್ಯಕ್ಕೆ ತೀವ್ರವದಾ ಧಕ್ಕೆಯನ್ನು ಉಂಟುಮಾಡಿದೆ. ಮಾನ್ಯ ರಾಜ್ಯಪಾಲರು ಭಾಷಣವನ್ನು ಓದುತ್ತಿರುವಾಗ ಅದನ್ನು ಧಿಕ್ಕರಿಸಿ, ತಾವೆ ತಯಾರು ಮಾಡಿದ ಭಾಷಣವನ್ನು ಓದುವುದರ ಮೂಲಕ ಮಾನ್ಯ ರಾಜ್ಯಪಾಲರ ಭಾಷಣವನ್ನು ಹರಿದು ಚೂರು ಮಾಡಿ ಕಾಲಿನಿಂದ ತುಳಿದು ಸದನದಲ್ಲಿ ಎಸೆದದ್ದು ಇದೊಂದು ಅತ್ಯಂತ ಖಂಡನೀಯವಾದ ವಿಚಾರವಾಗಿದೆ. ಸದಸ್ಯರುಗಳು ಇಂಥ ಅನುಚಿತ ವರ್ತನೆಯನ್ನು ತೋರಿಸುವುದರ ಮೂಲಕ ಮಾನ್ಯ ರಾಜ್ಯಪಾಲರರಿಗೂ ಸದನಕ್ಕೂ ಅತಿ ತೀವ್ರವಾದ ಅಗೌರವವನ್ನು ಉಂಟು ಮಾಡಿರುವುದಲ್ಲದೇ ಸದನದ ಕಾರ್ಯಕಲಾಪಗಳಿಗೆ ನಿಯಮ ಬಾಹಿರವಾಗಿ ಅಡ್ಡಿ ಉಂಟುಮಾಡಿ ಸದನದ ಹಕ್ಕು ಚ್ಯುತಿಯನ್ನು ಉಂಟುಮಾಡಿದ್ದಾರೆ ಹಾಗೂ ಸದಸ್ಯರಾದಂತಹ ಮಾನ್ಯ ಶ್ರೀರೀರ ಬಿ.ಎ. ಪಾಟೀಲ್ ಹಾಗೂ ನಾರಾಯಣ್ ಅಂದರೆ ಮಹರಾಷ್ಟ್ರ ಏಕೀಕರಣ ಸಮಿತಿಯವರು ರಾಜ್ಯಪಾಲರ ಭಾಷಣಕ್ಕೆ ಅಡ್ಡಿ ಉಂಟು ಮಾಡಿ ಧಿಕ್ಕರಿಸಿ ತಾವೇ ತಯಾರು ಮಾಡಿದ ಭಾಷಣವನ್ನು ಓದುವುದರ ಮೂಲಕ ಅನುಚಿತ ರೀತಿಯಲ್ಲಿ ವರ್ತಿಸಿರುವುದಲ್ಲದೇ ಸದನದ ಭಾವಿಗೆ ಬಂದು ಧಿಕ್ಕಾರ ಕೂಗಿಕೊಂಡು ಕಾನೂನು ಬಾಹಿರವಾಗಿ ವರ್ತಿಸಿ ಸಭೆಯ ನಡವಳಿಕೆಗಳಿಗೆ ಅಡ್ಡಿ ಉಂಟುಮಾಡಿ ಸಭೆಯ ಘನತೆಗೆ ಕುಂದು ತಂದು ಸದನಕ್ಕೆ ಹಕ್ಕುಚ್ಯುತಿಯನ್ನು ಎಸಗಿದ್ದಾರೆ. ಸದಸ್ಯರಲ್ಲಿ ಇಂಥ ಅನುಚಿತ ವರ್ತನೆಯಿಂದ ಸಭೆಯ ಸಾರ್ವಭೌಮತ್ವಕ್ಕೆ ಕುಂದು ಬಂದಿದೆ. ಈ ಸಭೆಯ ಘನತೆಯನ್ನು ಮತ್ತು ಸಾರ್ವಭೌಮತ್ವವನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಅನುಚಿತವಾಗಿ ವರ್ತಿಸಿದಂಥ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಬಿ.ಎ. ಪಾಟೀಲ್ ಹಾಗೂ ಶ್ರೀ ನಾರಾಯಣ್‌ರವರ ವಿರುದ್ಧ ನಿಯಮಾವಳಿ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಅತ್ಯಂತ ಹಳೆಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಒಂದು, ಕಾಲಿನಲ್ಲಿ ತುಳಿದರು ಎನ್ನುವ ಪದ ಬಂದಿದೆ. ತಾವು ಈ ಸದನದ ಅಧ್ಯಕ್ಷರು ಮತ್ತು ರಾಜ್ಯಪಾಲರ ಭಾಷಣ ನಡೆಯುವಾಗ ಪಕ್ಕದಲ್ಲಿ ತಾವು ಕುಳಿತಿದ್ದಿರಿ. ಎತ್ತರದ ಸ್ಥಾನದಲ್ಲಿ ತಾವು ಇದ್ದೀರಿ. ಇನ್ನೂ ಬಹಳ ಜನ ನಮ್ಮ ಅನೇಕ ಆಳುವ ಸದಸ್ಯರು ಮತ್ತು ಪತ್ರಕರ್ತರು ಇದ್ದರು. ಇಲ್ಲಿ ತುಳಿದರು ಎಂಬುದನ್ನು ಬಿಟ್ಟು ಮಿಕ್ಕಿದ್ದನ್ನೆಲ್ಲಾ ಅಂದರೆ ಹರಿದಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕಾಲಿನಿಂದ ತುಳಿದರು ಎನ್ನುವ ಬಗ್ಗೆ ನನ್ನ ಅಬ್ಜೆಕ್ಷ್ಟ್ ಇದೆ.

SRI QUMARUL ISLAM : He is making a falsee allegation.

MR. SPEAKER : They are good friends. Why are you worried?

SRI QUMARUL ISLAM : The whole House has witnessed. I am sitting behind him.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರರೇ, ಈಗ ಫ್ರಿವಿಲೇಜ್ ಎಂದು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ನಾಗೇಗೌಡರ ಬಗ್ಗೆಯೂ ನಾವು ಮೂವ್ ಮಾಡುವ ಸ್ಥಿತಿ ಬಂದಿದೆ. ಏಕೆಂದರೆ ನಾವು ಸದನದಲ್ಲಿ ಇದ್ದೆವು. ನಾನು 13 ವರ್ಷಗಳಿಂದಲೂ ಪ್ರತಿಭಟಿಸಿ ಹರಿದಿರುವುದು ಈ ಸದನದಲ್ಲಿ ಅನೇಕ ಭಾರಿ ನಡೆದಿದೆ. ನಿನ್ನೆ ನಾವು ಇಲ್ಲಿ ಇದ್ದಂಥ ಸಮಯದಲ್ಲೇ ಹರಿದದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಅಧ್ಯಕ್ಷರು ತಾವು ಇದ್ದಿರಿ, ತಮ್ಮ ಸಮಕ್ಷಮದಲ್ಲೇ ಇದು ನಡೆದಿದೆ. ತಾವು ಇಲ್ಲದೇ ಇದ್ದರೆ ಒಂದು ರೀತಿಯಿರುತ್ತಿತ್ತು.

(ಗೊಂಧಲ)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಅತ್ಯಂತ ಹಿರಿಯ ಸದಸ್ಯರು, ರಾಜಕೀಯವಾಗಿ ಬಹಳ ಹೋರಾಟ ಮಾಡಿದವರು, ಅವರಿಗೆ ಅಗೌರವ ಮಾಡಬೇಕು ಎನ್ನತಕ್ಕಂಥ ರೀತಿಯಲ್ಲಿ ಈ ಒಂದು ನೋಟೀಸ್‌ನ್ನಾಗಲೀ ಈ ಒಂದು ಪ್ರಿವಿಲೇಜ್‌ನ್ನಾಗಲೀ ತಂದಿರತಕ್ಕಂಥದ್ದು ಅಲ್ಲ. ಅವರು ಕನ್ನಡಕ್ಕೋಸ್ಕರ ಅನೇಕ ಜನ ಪೋಲೀಸ್‌ರಿಂದ ಬೂಟು ಒದೆ ತಿಂದಿದ್ದಾರೆ ಎಂದು ನಮಗೆ ಚೆನ್ನಾಗಿ ಗೊತ್ತಿದೆ. ಹಾಗೂ ಅವರು ಕನ್ನಡಕ್ಕೋಸ್ಕರ ಬಹಳ ಹೋರಾಟ ಮಾಡಿದ್ದಾರೆ. ನೆಲ, ಜಲಕ್ಕೋಸ್ಕರ ಬಹಳ ಹೋರಾಟ ಮಾಡಿದ್ದಾರೆ. ಅದರಲ್ಲೂ ನಮ್ಮ ಶಾಂತವೇರಿ ಗೋಪಾಲಗೌಡರ ಹತ್ತಿರ ಬಹಳಷ್ಟು ವರ್ಷಗಳ ಕಾಲ ವಿಶ್ವಾಸದಿಂದ ರಾಜಕೀಯವಾಗಿ ಕೆಲಸ ಮಾಡಿದ್ದಾರೆ. ಅವರು ಸದನದಲ್ಲಿ ಬಹಳ ಚುರುಕಾಗಿ ಇರತಕ್ಕಂಥ ಹಿರಿಯ ಸದಸ್ಯರು. ಅದರಲ್ಲಿ ಎರಡನೆಯ ಮಾತಿಲ್ಲ. ನಿನ್ನೆ ನಾನು ಮತ್ತು ಬಸವಣ್ಣಪ್ಪನವರು ಮಾತನಾಡಿಕೊಂಡೆವು. ಶ್ರೀ ವಾಟಾಳ್ ನಾಗರಾಜ್‌ರವರಿಗೆ ವಯಸ್ಸು ಆಗುತ್ತಾ, ಆಗುತ್ತಾ ಏಕೆ ಇವರ ವರ್ತನೆ ಇನ್ನೂ ಸ್ವಲ್ಪ ಏರುತ್ತಿದೆ ಅಂಥ ನಾನು ಮತ್ತು ಬಸವಣ್ಣಪ್ಪನವರು ವಿಶ್ವಾಸದಿಂದ ಮಾತನಾಡಿಕೊಂಡೆವು.

ಶ್ರೀ ವಾಟಾಳ್ ನಾಗರಾಜ್ : ನನ್ನ ವಯಸ್ಸಿನ ಬಗ್ಗೆ ಇವರಿಗೆ ಮಾತನಾಡಲು ಹಕ್ಕಿಲ್ಲ. ಆ ಪದವನ್ನು ಕಡತದಿಂದ ಖಂಡಿತವಾಗಿ ತೆಗೆಯಬೇಕು. ಇದು ನನಗೆ ಅಗೌರವ ಮಾಡಿದ ಹಾಗೆ. ತಮ್ಮ ಮೀಸೆ ಬೆಳ್ಳಗಾಗಿದೆ ಅಂದಮಾತ್ರಕ್ಕೆ ತಮಗೆ ವಯಸ್ಸಾಯಿತು ಎಂದು ಅರ್ಥವೇ? ಖಂಡಿತವಾಗಿ ಇದನ್ನು ಕಡತದಿಂದ ಖಂಡಿತವಾಗಿ ತೆಗೆಯಬೇಕು. ಇದು ನನಗೆ ಅಗೌರವ ಮಾಡಿದ ಹಾಗೆ. ತಮ್ಮ ಮೀಸೆ ಬೆಳ್ಳಗಾಗಿದೆ

ಅಂದಮಾತ್ರಕ್ಕೆ ತಮಗೆ ವಯಸ್ಸಾಯಿತು ಎಂದು ಅರ್ಥವೇ? ಖಂಡಿತವಾಗಿ ಇದನ್ನು ಕಡತದಿಂದ ತೆಗೆಯಬೇಕು.

ಅಧ್ಯಕ್ಷರು : ನಾನು ವಯಸ್ಸಿನ ಬಗ್ಗೆ ತಕರಾರು ಮಾಡುವುದಿಲ್ಲ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ವಯಸ್ಸಾಗಿದೆಯೇ ಎನ್ನುವ ಬಗ್ಗೆ ತನಿಖೆ ಮಾಡಲಿಕ್ಕೆ ಒಂದು ಸಮಿತಿಯನ್ನು ಉಂಟುಮಾಡಲಿಕ್ಕೆ ಆಲೋಚನೆ ಮಾಡೋಣ. ಆದರೆ ನನಗೆ ಯಾರಾದರೂ ವಯಸ್ಸಾಗಿದೆ ಎಂದು ಹೇಳಿದರೆ, ನಾನು ಹೌದು ಎಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಈ ರೀತಿ ಒಬ್ಬ ರಾಜಕೀಯವಾಗಿ ಅನುಭವ ಇರತಕ್ಕಂಥವರು ಶಾಸಕನಾಗಿ ನಡೆದುಕೊಂಡ ರೀತಿ ನಿಜವಾಗಿಯೂ ಇದರ ಬಗ್ಗೆ ನೋಟೀಸ್ ಕೊಡುವುದಕ್ಕೆ ಮೊದಲೇ ನಾನು ಮತ್ತು ಬಸವಣ್ಣಪ್ಪನವರೂ ಯೋಚನೆ ಮಾಡಿದೆವು.

ಇದು ಸರಿಯಲ್ಲ ಎನ್ನತಕ್ಕಂಥದ್ದು, ಈ ಸದನದ ಘನತೆ ಗೌರವಗಳನ್ನು ಒಬ್ಬ ಅತ್ಯಂತ ಹಿರಿಯ ನಾಯಕರು ರಾಜ್ಯದಲ್ಲಿ ಹೆಸರಾದಂಥ ಒಬ್ಬ ಮುಖಂಡರು ನಡೆದುಕೊಂಡ ರೀತಿ ಸರಿಯಲ್ಲ, ಇದು ನಮ್ಮ ಮನಸ್ಸಿಗೆ ಬಂದಿದೆ. ಈ ಸಭೆಯ ಗೌರವಗಳನ್ನು ಈ ನಮ್ಮ ಪರಂಪರೆ ಏನಿದೆ ಇದು ಬೇಕಾದಷ್ಟು ಇದೆ. ನಾವು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ನಮ್ಮ ವಿಧಾನಮಂಡಲದ ಚರಿತ್ರೆ ಬಹಳಷ್ಟು ಮೇಲಟ್ಟದ ಚರಿತ್ರೆ. ನಮ್ಮ ವಿಧಾನಮಂಡಲದ ಕಾರ್ಯಕಲಾಪಗಳನ್ನು ಎಷ್ಟೋ ರಾಜ್ಯಗಳಲ್ಲಿ ಇವೊತ್ತು ಸಹ ಅನುಕರಿಸುತ್ತಿರುತ್ತಾರೆ. ಎಷ್ಟೋ ರಾಜ್ಯಗಳಲ್ಲಿ ನಮ್ಮಲ್ಲಿರತಕ್ಕಂಥ ಸದಸ್ಯರುಗಳು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ನಡೆದುಕೊಳ್ಳುವ ರೀತಿ ಮೇಲಟ್ಟದಲ್ಲಿದೆ. ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಹರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ನಿನ್ನೆ ನಡೆದುಕೊಂಡ ರೀತಿ ಈ ಒಂದು ಸದನದ ಗೌರವವನ್ನು ಮತ್ತು ಸಾರ್ವಭೌಮತ್ವವನ್ನು ಬಹಳಷ್ಟು ಕೆಳಮಟ್ಟಕ್ಕೆ ತಂದಿದೆ ಎನ್ನತಕ್ಕಂಥದ್ದು ನನ್ನ ಸ್ವಂತ ಅಭಿಪ್ರಾಯ. ತಾವು ಪೇಪರ್‌ನಲ್ಲಿ ಓದಿರಬಹುದು, ಮೊನ್ನೆ ಒಂದು ಯಾವ ಸಚಿವರು ಬೀಡ ಹಾಕಿಕೊಂಡು ಸದನಕ್ಕೆ ಬರಕೂಡದು ಎನ್ನತಕ್ಕಂಥ ಒಂದು ನಿಯಮವಾಯಿತು. ಇಂಥ ಪರಂಪರೆಯನ್ನು ಉಳ್ಳಂಥ ಈ ಒಂದು ಸಭೆಗೆ ಮಾನ್ಯ ನಾಗರಾಜ್‌ರವರು ಮತ್ತು ಮಹರಾಷ್ಟ್ರ ಏಕೀಕರಣ ಸಮಿತಿಯವರು ವಿನಾಕಾರಣ ಪ್ರತಿವರ್ಷ ರಾಜ್ಯಪಾಲರ ಭಾಷಣದಲ್ಲಿ ನಡೆದುಕೊಳ್ಳುವ ರೀತಿ ಕರ್ನಾಟಕಕ್ಕೆ ಅವಮಾನ ಮಾಡುವ ರೀತಿ, ಕನ್ನಡಿಗರಿಗೆ ಅವಮಾನ ಮಾಡಿದ ರೀತಿ. ನಾವು ಕರ್ನಾಟಕದಲ್ಲಿ ಇಲ್ಲ ಎನ್ನುವ ಭಾವನೆ ಬರುವ ರೀತಿ ಇದೆ. ಆದ್ದರಿಂದ ಇದು ಒಂದು ಸದನಕ್ಕೆ, ಸದನದ ಸಾರ್ವಭೌಮತ್ವಕ್ಕೆ ಮತ್ತು ನಮ್ಮಗಳಿಗೆ ಅಂದರೆ ಕರ್ನಾಟಕದವರಿಗೆ ಮಾಡಿದಂಥ ಒಂದು ಅವಮಾನ ಎಂದೇ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಇನ್ನಿತರ ಇಬ್ಬರು ಸದಸ್ಯರುಗಳಿಗೆ.

SRI B.I. PATIL : Sir as you know nearly for about 39 years Belgaum dispute is going on.

MR. SPEAKER : I have not permitted you to speak. Hon'ble Member is on his legs. Mr. BI Patil, please resume your seat.

ಶ್ರೀ ಕೆ.ಎನ್. ನಾಗೇಗೌಡ : ಆದುದರಿಂದ ಮಾನ್ಯ ಅಧ್ಯಕ್ಷರೇ, ಇದು ಒಂದು ಗಂಭೀರವಾದ ವಿಚಾರ. ನನಗೆ ಹಾಗೂ ವಾಟಾಳ್ ನಾಗರಾಜ್‌ರವರಿಗೆ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಜೊತೆ ವೈಯಕ್ತಿಕವಾಗಿ ಬಹಳ ವಿಶ್ವಾಸ ಇದೆ. ನಾವು ಅವರ ವಿಚಾರದಲ್ಲಿ ಬಹಳಷ್ಟು ನಂಬಿಕೆ ಇಟ್ಟುಕೊಂಡಿರತಕ್ಕವರು. ನಾನು ಒಂದು ಸಂದರ್ಭದಲ್ಲಿ ಭಾಷಣ ಮಾಡುತ್ತಿದ್ದಾಗ ಹೇಳಿದೆ. ಯಾವುದೇ ಪಕ್ಷ ಸೋಲಲಿ,

ವಾಟಾಳ್ ನಾಗರಾಜ್‌ರವರು ಗೆದ್ದು ವಿಧಾನಾಸಭೆಗೆ ಬರಬೇಕು ಎನ್ನತಕ್ಕ ಮಾತನ್ನು ಹೇಳಿದೆ. ಇದನ್ನು ನಾನು ಸ್ಪಷ್ಟವಾಗಿ ಹೇಳಿದೆ. ಆದರೆ ಗೌವರ್ನರ್ ಭಾಷಣ ಹರಿದು ಹಾಕಿ ಎಂದು ಹೇಳುವುದು, ರಾಜ್ಯಪಾಲರ ಪ್ಯಾರಲಲ್ ಆಗಿ ಭಾಷಣ ಓದಿ ಎಂದು ಹೇಳುವುದು ಅಥವಾ ಗೌವರ್ನರ್ ಈ ಸದನದಲ್ಲಿ ಭಾಷಣ ಓದುವಾಗ ಈ ಸದನದಲ್ಲಿ ಇಷ್ಟು ಹಿರಿಯ ಅನುಭವ ಇರತಕ್ಕಂಥವರು ನಡೆದು ನಡೆದುಕೊಂಡ ರೀತಿ ಪತ್ರಿಕೆಗಳಲ್ಲಿ ಬರುವುದು, ಕರ್ನಾಟಕ ಅಸೆಂಬ್ಲಿ ಒಳಗೆ ಈ ರೀತಿ ನಡವಳಿಕೆ ಇದೆ ಎನ್ನುವ ಅಭಿಪ್ರಾಯ ಬರುವುದು ಸರಿಯಲ್ಲ ಬೇರೆ ಅಸೆಂಬ್ಲಿಗಳಿಗೂ ನಮಗೂ ಬಹಳ ವ್ಯತ್ಯಾಸವಿದೆ ಎನ್ನತಕ್ಕಂಥದ್ದನ್ನು ಅವರು ಅರ್ಥಮಾಡಿಕೊಂಡಿದ್ದಾರೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದುದರಿಂದ ನಮ್ಮ ನಿಯಮಾವಳಿ ಪ್ರಕಾರ ಹಕ್ಕುಚ್ಯುತಿ ಸಮಿತಿಗೆ ತಾವು ಇದನ್ನು ರೆಫರ್ ಮಾಡಬೇಕು. ಇಲ್ಲದಿದ್ದರೆ ಇನ್ನೂ ಒಂದು ಸಲಹೆ ಅಂತ ಹೇಳಿದರೆ, ಅವರು ಅತ್ಯಂತ ಹಿರಿಯರಾದುದರಿಂದ ನಡೆದಂಥ ವರ್ತನೆ ಏನಿದೆ ಅದು ಸರಿಯಲ್ಲ ಎಂದು ಹೇಳಿ ಕ್ಷಮಾಪಣೆ ಕೇಳಿದರೆ ನಮ್ಮ ಅಭ್ಯಂತರ ಏನೂ ಇಲ್ಲ, ಆದರೆ ಅವರು ಕ್ಷಮಾಪಣೆ ಎಂದು ಆದರೂ ಖಂಡಿತ ಕೇಳಲೇಬೇಕು. ಏಕೆಂದರೆ ಇದು ಸದನದ ಪ್ರಶ್ನೆ. ನಮ್ಮ ವೈಯಕ್ತಿಕವಾದ ವಿಚಾರವಲ್ಲ. ಪ್ರತಿ ವರ್ಷ ಅವರು ಒಂದು ಒಂದು ಟೋಪಿ ಹಾಕಿಕೊಂಡು ಬರುವುದು, ಇವರು ಒಂದು ಪೇಟ ಹಾಕಿಕೊಂಡು ಬರುವುದು ಈ ಎರಡೂ ಆದರೆ, ಪೇಟದ ಬಗ್ಗೆ ಪ್ರಸ್ತಾಪವಿಲ್ಲ. ಅದು ಒಂದು ರೀತಿ ಸರಿಯಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಭಾಷಣ ಯಾವ ರೀತಿ ಬೇಕಾದರೂ ಮಾತನಾಡಲಿ ಅವರು ಪ್ಯಾಂಟ್ ಹಾಕಿಕೊಂಡು ಬರುವುದು, ಪೇಟ ಹಾಕಿಕೊಂಡು ಬರುವುದು ಚಡ್ಡಿ ಹಾಕಿಕೊಂಡು ಬರುವುದು ಇವೆಲ್ಲಾ ಮಾತನಾಡಬಾರದು. ಬೇರೆ ವಿಷಯದ ಬಗ್ಗೆ ಮಾತನಾಡಲಿ. ಆದರೆ ಯಾವ ರೀತಿ ಉಡುಪನ್ನು ಹಾಕಿಕೊಂಡು ಬರಬೇಕು ಎನ್ನುವುದು ನನಗೆ ಸೇರಿದ್ದುದು.

1.10 ಪಿ.ಎಂ.

ನೀವು ಈ ರೀತಿ ಉಡುಪು ಹಾಕಿಕೊಂಡು ಬರಬೇಡಿ, ಈ ರೀತಿ ಕನ್ನಡಕ ಹಾಕಿಕೊಳ್ಳಬೇಡಿ, ಈ ರೀತಿ ಪಾದರಕ್ಷೆ ಹಾಕಬೇಡಿ ಎಂದು ಹೇಳತಕ್ಕಂತಹ ಅಧಿಕಾರ ನಿಮಗಿಲ್ಲ. ಆ ರುಮಾಲು ಸಮಗ್ರ ಕರ್ನಾಟಕ ಜನತೆಯ ಸಂಕೇತ. ಆ ರುಮಾಲಿಗೆ ಇವರು ಅಗೌರವ ಮಾಡಿದ್ದಂತಾಗುತ್ತದೆ. ಹಿಂದೆ ಈ ಸದನವನ್ನು ಕಟ್ಟಿಸಿದಂತಹ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರರ ತಲೆಯ ಮೇಲೆ ಏನಿದೆ ಸ್ವಲ್ಪ ನೋಡಿ ಸ್ವಾಮಿ. ಮತ್ತೇನಿದು, ಅವರು ಅದು ಹಾಕಿಕೊಂಡು ಬಂದರು, ಇವರು ಇದು ಹಾಕಿಕೊಂಡು ಬಂದರು ಎಂದು ಅಸಹ್ಯವಾಗಿ ಮಾತನಾಡುವುದು ಸರಿಯಲ್ಲ. ಇದು ಅತ್ಯಂತ ಮಹತ್ವದ್ದಾಗಿದೆ. ನಾನೂ ಕೂಡ ಇದರ ಬಗ್ಗೆ ಸುಧೀರ್ಘವಾಗಿ ಮಾತನಾಡುತ್ತೇನೆ. ಮಾನ್ಯ ನಾಗೇಗೌಡರ ಬಗ್ಗೆ ನನಗೆ ಅಪಾರವರಾದ ಗೌರವವಿದೆ. ಇವರು ನಮ್ಮ ಉಡುಪುಗಳ ಬಗ್ಗೆ ಒಂದೊಂದಾಗಿ ಎಳೆಎಳೆಯಾಗಿ ಬಿಡಿಸಿ ಬಿಡಿಸಿ ಏಕೆ ಹೇಳುತ್ತಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ಹೇಳಿದ ಮಾತನ್ನು ತಾವು ಕೇಳಲಿಲ್ಲ. ಏನು ಹೇಳಿದಿರಿ ಸ್ವಾಮಿ ದಯಮಾಡಿ ಇನ್ನೊಂದು ಸಲ ಹೇಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಸದಸ್ಯರು ಬೇಕಾದರೆ ಸೀರೆ ಉಟ್ಟಿಕೊಂಡು ಬರಬಹುದು ಅದನ್ನು ಕೇಳುವುದಕ್ಕೆ ಯಾರಿಗೂ ಹಕ್ಕಿಲ್ಲ.

ಶ್ರೀಮತಿ ಪ್ರಮೀಳ ಎಸ್. ನಂಜೇಗೌಡ : ಪ್ರಮೀಳ ಅವರು ಬೇಕಾದರೆ ಪ್ಯಾಂಟ್ ಹಾಕಿಕೊಂಡು ಬರಬಹುದು. ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಪ್ರಮೀಳ ಅವರು ಬೇಕಾದರೆ ಪ್ಯಾಂಟ್ ಹಾಕಿಕೊಂಡು ಬರಬಹುದು. ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಸಿ.ಎಂ. ಉದಾಸಿ : ಗಂಡಸರು ಏನಾದರೂ ಸೀರೆ ಉಡಬಾರದೆಂದು ರೂಲ್ಸ್ ಇಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ತಾವು ಎತ್ತಿದ ವಿಚಾರದಲ್ಲಿ ಒಂದು ತಾಂತ್ರಿಕವಾದಂತಹ ದೋಷ ಇದೆ. ಏಕೆಂದರೆ ಮುಖ್ಯವಾಗಿ ತಾವು ರೂಲ್ ನೋಡಿ, ಕಾಂಡಕ್ಟ್ ಆಫ್ ದಿ ಮೆಂಬರ್ಸ್‌ನಲ್ಲಿ ಬರುತ್ತದೆ. ಇದು ಪ್ರಿವಿಲೆಜ್‌ನಲ್ಲಿ ಬರುವುದಿಲ್ಲ. ಇಟ್ ಇಸ್ ಕಾಂಡಕ್ಟ್ ಆಫ್ ಮೆಂಬರ್ಸ್. ನಿನ್ನೆ ಯಾವ ರೀತಿ ಒಬ್ಬ ಸದಸ್ಯರು ವರ್ತನೆ ಮಾಡಿದ್ದಾರೆ. ಅದಕ್ಕೆ ಸಂಬಂಧಿಸಿದ್ದುದು.

MR. SPEAKER : It is under rule 127 read with 199.

SRI M. VEERAPPA MOILY : It is conduct of the Member, it will have to be dealt with separately. The rule under which they are arguing is not correct. It cannot be dealt with under that rule.

MR. SPEAKER : I will take cognisance of the point of order raised by you. Let me think over.

SRI M. VEERAPPA MOILY : You have not heard me properly. I am guoting Practice and Procedure of Parliament by Kaul and Shakdher, page-264 regarding Procedure for inquiry into conduct of a Member. It reads thus:

"Anyone who wasa reasonable belief that a member has acted in a manner which, in his opinion, is inconsistent with the dignity of the House or the standard expected of a member of parliament, may inform the Speaker or the Leader of the House is required first to make sure of his facts and base them on such authentic evidence, documentary or circumstantial, as he may have. He has to be careful in sifting and arranging facts because, if the allegations are proved to be frivolous, worthless or based on personal jealousy or animosity, directly or indirectly, he will himself be liable to a charge of the breach of the utmost importance that allegations are based on solid, tested and checked facts."

ಏಕೆಂದರೆ ಒಂದು ವೇಳೆ ತಾವು ಫ್ಯಾಕಟ್ಸ್ ಹೇಳಿದ್ದರೆ - ತುಳಿದಿದ್ದರು, ಹರಿದಿದ್ದರು ಅಥವಾ ಏನಾದರೂ ತಮ್ಮ ಪ್ರಸ್ತಾವನೆಯಲ್ಲಿ ಬಂದುಬಿಟ್ಟರೆ, ತಾವು ತಪ್ಪಿದ್ದರೆ, ಎಡವಿದ್ದರೆ ತಾವೇ ಪ್ರಿವಿಲೇಜ್‌ಗೆ ಗುರಿಯಾಗುತ್ತೀರಿ. ಅದರಿಂದ, ಇದರ ಬಗ್ಗೆ ಸ್ವಲ್ಪ ಕೇರ್‌ಫುಲ್ಲಾಗಿ ಹ್ಯಾಂಡ್ಲ್ ಮಾಡಬೇಕು. ಏಕೆಂದರೆ ನನ್ನ ಸೂಚನೆ ಏನೆಂದರೆ It comes under conduct of a Member. A different treatment will have to be given.

ಹಾಗಿರುವಾಗ ಈ ಸದನದ ನಾಯಕರು ಅಥವಾ ತಮಗೆ ಅವರು ಈಗ ಅದನ್ನು ತಾವು ಸ್ವೀಕಾರ ಮಾಡಿ, ಅದರ ಬಗ್ಗೆ ವಿಚಾರ ಮಾಡಿ, ಆಮೇಲೆ ಅವರಿಗೆ ತಾವು ಈ ವಿಷಯವನ್ನು ಎತ್ತಲಿಕ್ಕೆ ಪರ್ಮಿಷನ್ ಕೊಟ್ಟರೆ That will be

morce appropriate. Some preliminary investigation will have to be done.

ಅದನ್ನು ತಾವು ಮಾಡಬೇಕಾಗುತ್ತದೆ; ನಾಯಕರು ಮಾಡಬೇಕಾಗುತ್ತದೆ. ಆ ಪ್ರಿಲಿಮಿನರಿ ಇನ್ವೆಸ್ಟಿಗೇಷನ್ ಮಾಡಿದ ಮೇಲೆ ಈ ಸದನದ ವಸ್ತುವಾಗಿ ನೀವು ಚರ್ಚ್ ಮಾಡಿದರೆ ಇದಕ್ಕೆ ಗಾಂಭೀರ್ಯ ಬರುತ್ತದೆ. ಏತಕ್ಕೆಂದರೆ ನಾವು ಸಾಮಾನ್ಯವಾಗಿ ಇದೊಂದು ಅಧಿಕಾರಿಗಳ ವಿರುದ್ಧ ಮಾಡಲಿಕ್ಕೆ ಚರ್ಚೆಯಲ್ಲ. ಒಬ್ಬ ಗೌರವಯುತವಾದಂತಹ ಸದಸ್ಯರ ಮೇಲೆ ಮತ್ತೊಬ್ಬ ಸದಸ್ಯರು ಮಾಡಿದಂತಹ ಆಪಾದನೆ. ಹಾಗಿರುವಾಗ ಅದನ್ನು ಬಹಳ ಜಾಗ್ರತೆಯಿಂದ ನೋಡಿದಾಗ ಮಾತ್ರ ಇಂತಹ ವಿಚಾರಗಳಿಗೆ ಹೆಚ್ಚು ಘನತೆ ಬರುತ್ತದೆ, ಗಾಂಭೀರ್ಯ ಬರುತ್ತದೆ ಮತ್ತೆ ಅದು ತಪ್ಪಿದರೆ ಆಮೇಲೆ ತಾವು ಪ್ರಿಲಿಮಿನರಿ ಇನ್ವೆಸ್ಟಿಗೇಷನ್ ತಾವು ಇಬ್ಬರು ಮಾಡಿದ ಮೇಲೆ, ತಾವು ಚರ್ಚೆ ಮಾಡಿದ ಮೇಲೆ ಈ ವಿಷಯವನ್ನು ಇಲ್ಲಿಗೆ ತಂದರೆ ಅದಕ್ಕೆ ಹೆಚ್ಚು ಗೌರವ ಬರುತ್ತದೆ ಮತ್ತು ತೂಕ ಬರುತ್ತದೆ. ಆಮೇಲೆ ಯಾವ ರೀತಿಯಾಗಿ ಪ್ರಿವಿಲೇಜ್ ಮಾಡಬೇಕು ಅಥವಾ ಕಾಂಡಕ್ಟ್ ಆಫ್ ಮೆಂಬರ್ಸ್ ಅದರಲ್ಲಿ ಟ್ರೀಟ್ ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪಮೊಯಿಲಿಯವರು ಏನು ಪ್ರಸ್ತಾವನೆ ಮಾಡಿದ್ದಾರೆ, ನಾವು ಏನು ಆಪಾದನೆ ಗೌರವಯುತ ಸದಸ್ಯರ ಮೇಲೆ ಮಾಡಿದ್ದೇವೆ ಅದು ಸರಿಯಿಲ್ಲ ಅಂದರೆ ಪ್ರಿವಿಲೇಜ್ ನಮ್ಮ ಮೇಲೆ ಬರುತ್ತದೆ ಎನ್ನತಕ್ಕಂತಹ ಪದ ಏನು ಹೇಳಿದ್ದಾರೆ ಆ ಮಾತನನ್ ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇನೆ. ನಾವು ಈ ಸದನದಲ್ಲಿ ಎಲ್ಲರೂ ನೋಡಿರತಕ್ಕಂತಹ ವಿಚಾರವನ್ನು ಪ್ರಸ್ತಾಪ ಮಾಡಿ, ಈ ಸದನದಲ್ಲಿ ಎಲ್ಲರೂ, ಮುಂದೆ ಆ ಕಡೆ ಪ್ರೆಸ್‌ನವರು ಕುಳಿತಿದ್ದಾರೆ, ಆ ಸದಸ್ಯರು ಇದ್ದಾರೆ ಇಡೀ ಸದನ ಕುಳಿತಿದೆ ಎಲ್ಲರೂ ನೋಡಿರತಥದ್ದು ನಾವು ನೋಡಿದ್ದೇವೆಂದು ತಿಳಿದುಕೊಂಡು ನಾನು ನೋಟಿಸನ್ನು ಕೊಟ್ಟಿರತಕ್ಕಂತಹ ವಿಚಾರ. ಆದುದರಿಂದ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎನ್ನತಕ್ಕ ದೃಷ್ಟಿಯಿಂದಲೇ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು. ಎರಡನೆಯದು ತಾವು ಆರ್ಟಿಕಲ್ 175 ಮತ್ತು 176 ಓದಿದಿರೆ, ಈ ಸದನದ ಗೌರವವನ್ನು ಯಾರೇ ತೆಗೆದರೂ ಕೂಡ ಆ ಗೌರವ ಎತ್ತಿಹಿಡಿಯುವುದಕ್ಕೆ ಮತ್ತೊಬ್ಬ ಸದಸ್ಯರ ಪ್ರಿವಿಲೇಜನ್ನು ಆ ಸದಸ್ಯನ ಮೇಲೆ ಮೂವ್ ಮಾಡಬಹುದು. 175 ಮತ್ತು 176 ರಲ್ಲಿ ಆರ್ಟಿಕಲ್ ಸ್ಪಷ್ಟವಾಗಿದೆ. ಅದರ ಮೇಲೆ ನಾವು ಪ್ರಿವಿಲೇಜ್ ನೋಟಿಸ್ ಮತ್ತು ಅಬ್ಸರ್ವೇಷನ್ ಆಫ್ ಆರ್ಡರಿಂಗ್ ದೂರರಿಂಗ್ ಗೌರ್ನರ್ ಆಡ್ರೆಸ್ ಎರಡು ಕಂಬೈನ್ ಮಾಡಿ ಕೊಟ್ಟಿರತಕ್ಕಂತಹ ವಿಚಾರ. ನಿಯಮಾವಳಿಗಳಡಿ ಬರತಕ್ಕಂತಹ ವಿಚಾರ. ಇದೊಂದು ಸದನದ ಗೌರವವನ್ನು, ಈ ಸದನದ ಘನತೆ, ಒಂದು ಸಾರ್ವಭೌಮತ್ವವನ್ನು ಕಾಪಾಡುವುದಕ್ಕೆ ಮತ್ತೊಬ್ಬ ಸದಸ್ಯರು ಇನ್ನೊಬ್ಬ ಸದಸ್ಯರ ಮೇಲೆ ಮಾಡಿರತಕ್ಕಂತಹ ಆಪಾದನೆ. ಅದು ಸರಿ ಎಂದು ನನಗನಿಸಿದೆ. ನಾವು ಕೊಟ್ಟಿರತಕ್ಕಂಥ ನೋಟೀಸ್ ಸರಿಯಿದೆ. ಈ ಸದನದ ಗೌರವವನ್ನು ಕಾಪಾಡತಕ್ಕಂತಹ ಹಕ್ಕು ನನಗೂ ಸಹ ಇದೆ. ಈ ಸದನದ ಘನತೆಯನ್ನು ಕಾಪಾಡತಕ್ಕಂತಹ ಹಕ್ಕು ನಾನು ಸದಸ್ಯನಾಗಿ, ಈ ಸದನದ ಗೌರವವನ್ನು ಕಳೆಯುವುದಕ್ಕೆ ಬಿಡಬಾರದು. ಯಾರೇ ಸದಸ್ಯರಾದರೂ, ಈ ಸದನದ ಗೌರವ ಹೋಗುವುದಕ್ಕೆ ಬಿಡಬಾರದು. ಆ ದೃಷ್ಟಿಯಿಂದ ನಾನು ನೋಟೀಸನ್ನ್ ಕೊಟ್ಟಿರತಥದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ. ಅಬ್ಸರ್ವೇಷನ್ ಆಫ್‌ಆರ್ಡರ್ ಡ್ಯೂರಿಂಗ್ ಗೌರ್ನರ್ ಅಡ್ರೆಸ್ ರೂಲ್ 27 ರಲ್ಲಿ ಇದನ್ನು

ಹೊಸದಾಗಿ ನಾವು ಸೇರಿಸಿದ್ದೇವೆ. ತಾವು ದಯಮಾಡಿ ಮುಂದಿನ ಪ್ಯಾರಗ್ರಾಫ್ ನೋಡಿದರೆ ಸ್ಪಷ್ಟವಾಗುತ್ತದೆ. ಇದು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಲಿಕ್ಕಾಗುವುದಿಲ್ಲ.

It is further reinforced by the new amended rule we have introduced. It further reads thus.

"When information regarding the alleged misconduct on the part of a member is received, the usual practice is that the prime Minister (here is the Leader of the House) examines the statement of charges and such further information as the prime Minister may call for and if he is satisfied that the matter and fair opportunity to the member to state his own version of the case, to disprove the prime Minister such information as may assist him to come to a conclusion. After the Member's Prime Minister, he sifts the evidence critically. If the member has given adequate explanation and it is found that there is nothing improper in his conduct and he has cleared all the doubts, the matter may be dropped and the member exonerated. It the prime Minister considers that a statement to that effect should be made in the House he may do so, If however, on the basis of the expolanation given by the member and the evidence, it is proposed by the Prime Minister and held by the investigation,the matter is brought before the House on a motion for the appointment of a parliamentary Committee to investigate the specific matter and to report to the House by the specified date.

However, if in the course of Preliminary investigation it is found that the person making the allegations has supplied incorrect facts or tried to bring discredit to the name of the member willfully or through carelessness, he has deemed to be guilty of a breach of privilege of the House."

ಒಂದು ವೇಳೆ ಸರಿಯಾದಂಥ ಮಾಹಿತಿಯನ್ನು ತಾವು ಕೊಡದಿದ್ದರೆ, ಆಗ ತಮ್ಮ ಮೇಲೆ ಪ್ರಿವಿಲೇಜ್ ಆಗುತ್ತದೆ. ಆದರೆ ಈಗ it is the question of the conduct of a member.The conduct of a member can be examined, not by the privilege committee, but by a separate committee constituted, after the preliminary investigation, by the Leader or by the Speaker as the case may be.

ಆದ್ದರಿಂದ ಈ ವಿಚಾರ ಏನು ಎತ್ತಿದ್ದಾರೆ ತಾವು ಇದನ್ನು ರೆಫರ್ ಮಾಡಿ, ಇದರ ಬಗ್ಗೆ ವಿಚಾರ ಮಾಡಿ, ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ತಾವು ಇಬ್ಬರೂ ಮಾಡಿದ ಮೇಲೆ ಅದು ಸತ್ಯ ಎಂದು ಕಂಡರೆ ಆಮೇಲಲೆ ಈ ಸದನದಲ್ಲಿ ಒಂದು ಮೋಷನ್ ಮೂವ್ ಮಾಡಿಕೊಳ್ಳಬಹುದು ಮತ್ತು It is further re-inforced by the new rule which we have introduced. The conduct of member, unfortunately by mistake or error,

ಇದರ ಪ್ರಿವಿಲೇಜ್ ತಂದು ನಾವು ಡಿಸ್ಟಾರ್ಟ್ ಮಾಡಿಬಿಟ್ಟಿದ್ದೇವೆ. That does not mean that we should not go to the correct procedure.

ಅನೇಕ ಬಾರಿ ಇಂಥಾದ್ದನ್ನು ಪ್ರಿವಿಲೇಜ್ ಮೋಷನ್ ಆಗಿ ತಂದದ್ದೂ ಇದೆ, ಇಲ್ಲವೆಂದಲ್ಲ, ಆದರೆ ಅದು ಸರಿಯಾದಂಥ ಮಾರ್ಗ ಅಲ್ಲ. ಸರಿಯಾದಂಥ ಪ್ರೊಸೀಜರ್ ಅಲ್ಲ. ಅದೂ ಕೂಡ ರೂಲ್ 27 ಮಾಡಿದ ಮೇಲೆ ಅದು ಬಹಳ ಸ್ಪಷ್ಟವಾಗಿ ಇರುವುದರಿಂದ ಮತ್ತು ಕಾಲ್ ಅಂಡ್ ಶಕ್ಷರ್ ಪ್ರಕಾರ ಸಂಪ್ರದಾಯಗಳು ಏನು ಇವೆ ಅವನ್ನು ಅನುಸರಿಸಿ ಸರಿಯಾದಂಥ ಮಾರ್ಗವನ್ನು ತಾವು ಉಪಯೋಗ ಮಾಡುವುದು ಒಳ್ಳೆಯದು ಎಂದು ನನ್ನ ಸಲಹೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗೇಗೌಡರು ಮತ್ತು ಇತರ ಮೂವರು ಸದಸ್ಯರು ಕೊಟ್ಟಿರತಕ್ಕ ನೋಟೀಸು ನಮ್ಮ ಸದನದ ನಿಯಮಾವಳಿ 27 ಮತ್ತು 191 ಕ್ಕೆ ಅನುಗುಣವಾಗಿದೆ. ಈ ಹಿಂದೆ ನಿಯಮ 27 ಇರಲಿಲ್ಲ. ನಿಯಮ 27ನ್ನು ಹೊಸದಾಗಿ ಸೇರಿಸಿರಸತಕ್ಕಂಥ ಕಾರಣ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ, ರಾಜ್ಯಪಾಲರು ಆ ಭಾಷಣವನ್ನು ಸಭೆಯಲ್ಲಿ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಯಾರೇ ಅನುಚಿತರಾಗಿ ವರ್ತನೆ ಮಾಡತಕ್ಕಂಥಾದ್ದು ಅಥವಾ ಸಭೆಯ ಗೌರವವನ್ನು, ರಾಜ್ಯಪಾಲರ ಗೌರವವನ್ನು ಅವಮಾನ ಮಾಡತಕ್ಕಂಥ ರೀತಿಯಲ್ಲಿ ವರ್ತಿಸಿದರೆ ಅವರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುವುದಕ್ಕಾಗಿ ನೇರವಾಗಿ ಒಂದು ಹೊಸ ನಿಯಮವನ್ನು ತರುವುದರ ಮುಖಾಂತರ ಅದನ್ನು ಕ್ರಮ ಕೈಗೊಳ್ಳಬಹುದು ಎಂದು ತೋರಿಸಿದ್ದಾರೆ. ಅಂದರೆ ಆ ನಿಯಮ ಯಾವುದೇ ಆದರೂ ಕೂಡ ಯಾವುದೇ ಒಂದು ಅನುಚಿತ ವರ್ತನೆ ಆ ಸಂದರ್ಭದಲ್ಲಿ ಆಗುತ್ತಿರತಕ್ಕಂಥಾದ್ದು ಆ ಸದನದ ಗೌರವದ ಪ್ರಶ್ನೆ ಆಗುತ್ತದೆ. ಅದು ಸದನದ ಗೌರವದ ಪ್ರಶ್ನೆ ಆದ ಕೂಡಲೇ ಅದು ಸದನದ ಹಕ್ಕುಚ್ಯುತಿ ಪ್ರಶ್ನೆ ಆಗುತ್ತದೆ. ಅದು ಸದನದ ಹಕ್ಕುಚ್ಯುತಿ ಪ್ರಶ್ನೆ ಆದ ಕೂಡಲೇ ತಾವು ಕೈಗೊಳ್ಳತಕ್ಕಂಥ ತೀರ್ಮಾನ ಬಹುಶಃ ಎಲ್ಲರೂ ನೋಡಿರತಕ್ಕಂಥ ಒಂದು ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಬೇಕು ಅಥವಾ ಅದಕ್ಕೆ ಒಂದು ಬೇರೆಯಾಗಿರತಕ್ಕ ಸ್ಪೆಷಲ್ ಕಮಿಟಿಯನ್ನು ತಾವು ರಚಿಸಬೇಕೆಂದು ಹೇಳುತ್ತಾ ಇರತಕ್ಕದ್ದು ಒಂದು ಪ್ರಶ್ನೆ. ಮಾಜಿ ಮುಖ್ಯಮಂತ್ರಿಗಳೂ ಮತ್ತು ಮಾನ್ಯ ಸದಸ್ಯರೂ ಆಗಿರತಕ್ಕ ಮಾನ್ಯ ಮೊಯಿಲಿಯವರು ನಿಯಮ 27ರ ಬಗ್ಗೆ ಹೇಳಿರತಕ್ಕಂಥಾದನ್ನು ನಾನು ಅವರ ಗಮನಕ್ಕೆ ತರಲಿಚ್ಚಿಸುತ್ತೇನೆ. ನಿಯಮ 27

"No member shall obstruct or interrupt the address either before or after the address during its duration with any speach or point of order or in any manner and regarded as gross breach of the order of the House.

Sir, it is the absolute breach of order of this House. Breach of order ultimately amounts to breach of proceddings of this House and ultimately it amounts to contempt of the House.

ಆದರೆ ಮಾನ್ಯ ಸಭಾಪತಿಗಳೇ ಇವತ್ತು ಎತ್ತಿರತಕ್ಕಂಥ ಅಂಶ ನಿಯಮ 27 ಮತ್ತು 191 ರ ಅಡಿಯಲ್ಲಿ. ಆ ಒಂದು ಸಂದರ್ಭ ಬಂದಾಗ ನಾವು ಯಾವುದೇ ಕಾರ್ಯಕ್ರಮ ಮಾಡಿದರೂ ಕೂಡ ಅದರಲ್ಲಿಯೂ ಇದು ಮಾನ್ಯ ರಾಜ್ಯಪಾಲರು ಒಂದು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡತಕ್ಕಂಥ ಭಾಷಣ. ರಾಜ್ಯಪಾಲರು ಆ ಒಂದು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡತಕ್ಕಂಥ ಭಾಷಣ. ರಾಜ್ಯಪಾಲರ ಭಾಷಣ ಎಂದರೆ ಅದು it is the property of the House. Breach of order ultimatley amounts to breach of proceedings of this House and ultimately it amount to contempt of the House.

ರಾಜ್ಯಪಾಲರ ಭಾಷಣ ಈ ಸದನದ ಸ್ವತ್ತು ಆಗಿರತಕ್ಕಂಥಾದನ್ನು ನಾವು ಗೌರವದಿಂದ ಕಾಣಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯಕ್ಕೆ ಪ್ರೊಸೀಡಿಂಗ್ಸ್ ಅನ್ನು ಮಾನ್ಯ ಸದಸ್ಯರುಗಳು ಸ್ವಲ್ಪ ಮಟ್ಟಿಗೆ ತೆಗೆದು ಹರಿದು ಹಾಕಿ ಈ ಒಂದು ಸದನದ ಗೌರವವನ್ನು ಘನತೆಯನ್ನು ಗಾಂಭೀರ್ಯವನ್ನು ಕಡಿಮೆ ಮಾಡುತ್ತಿರತಕ್ಕಂಥ ಪರಿಸ್ಥಿತಿ ನಿರ್ಮಾಣ ಆದಂಥ ಸಂದರ್ಭದಲ್ಲಿ ಈ ಸದನ ಖಂಡಿತವಾಗಿ ಕಣ್ಣು ಮುಚ್ಚಿ ಕುಳಿತುಕೊಳ್ಳಲಿಕ್ಕಾಗುವುದಿಲ್ಲ. ಇದು ಸದನದ ಸಾರ್ವಭೌಮತ್ವದ ಪ್ರಶ್ನೆ ಆಗುತ್ತದೆ. ಇದು ಸದನದ ಹಕ್ಕುಚ್ಯುತಿ ಪ್ರಶ್ನೆ ಆಗುತ್ತದೆ. ಇದು ಸದನದ ಎತ್ತರಿಕೆಯ ಪ್ರಶ್ನೆ ಆಗುತ್ತದೆ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್ ಮತ್ತು ಇತರ ಇಬ್ಬರು ಸದಸ್ಯರು ಮಾಡಿರತಕ್ಕಂಥ ಕೆಲಸದ ಬಗ್ಗೆ ಈ ಸಂದರ್ಭದಲ್ಲಿ ಎತ್ತಿರತಕ್ಕ ನಿಯಮ 27 ಮತ್ತು 191ರ ಅಡಿಯಲ್ಲಿ ತಮಗೆ ಪರಮೋಚ್ಚ ಅಧಿಕಾರ ಯಾವುದು ಇದೆ, ಆ ಅಧಿಕಾರವನ್ನು ಯಾವ ನಿಯಮದ ಅಡಿಯಲ್ಲಿ ತಾವು ಅದನ್ನು ಬಳಸಬೇಕೆಂದು ಇದೆ, ಅದನ್ನು ಬಳಸಿ, ಆ ಪರಮೋಚ್ಚ ಅಧಿಕಾರವನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ನಿಯಮ 27 ಮತ್ತು 191 ಎರಡೂ ಒಂದೇ. ಆದರೆ ನಿಯಮ 191ರ ಅಡಿಯಲ್ಲಿ ಗೌರ್ನರ್ ಅಡ್ರೆಸ್ಸಿಗೆ ಸಂಬಂಧಪಟ್ಟಹಾಗೆ ನೇರವಾಗಿರತಕ್ಕ ನಿಯಮವನ್ನು ಕೊಟ್ಟಿದ್ದಾರೆ, 191ರ ಅಡಿಯಲ್ಲಿ ಅದಕ್ಕೆ ಸಂಬಂಧಕಡದೇ ಇರತಕ್ಕಂಥ ಬೇರೆ ಬೇರೆ ವಿಚಾರಗಳನ್ನು ಕೊಟ್ಟಿದ್ದಾರೆ. ಬಹುಶಃ ಯಾವುದಾದರೊಂದು ಕಾರ್ಯಕ್ರಮ ಈ ಸದನದಲ್ಲಿ ನಡೆಯಬಹುದು. ಸದನದ ಹೊರಗಡೆ ಕೂಡ ನಡೆಯಬಹುದು. ಮಾನ್ಯ ಮೊಯ್ಲಿಯವರು ಹೇಳಿರತಕ್ಕಂಥ ಒಂದು ವಿಚಾರ ಎಂದರೆ ಇಂಥ ಒಂದು ಸಂದರ್ಭ ಬಂದಾಗ ಅದನ್ನು ಸಭಾನಾಯಕರು ಮುಖ್ಯ ಮಂತ್ರಿಗಳಿಗೆ ಕೊಟ್ಟು ಮತ್ತೆ ಸಭಾಧ್ಯಕ್ಷರಿಗೆ ಕೊಟ್ಟು ಅದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಿ ಅಲ್ಲಿಂದ ಏನಾದರೊಂದು ಸಾಬೀತು ಆದಾಗ ಒಂದು ಮೋಷನ್ ಅನ್ನು ತರಬೇಕು ಎಂದು ಹೇಳತಕ್ಕದ್ದು ಯಾವುದು ಇದೆ ಅದು ಈ ಸದನದಲ್ಲಿ ಕಣ್ಣಾರೆ ಕಂಡ ಮೇಲೆ ಅದು ನಿಯಮ 27 ಮತ್ತು 191ರ ಅಡಿಯಲ್ಲಿ ಬಂದಮೇಲೆ ಅದು ಸಭಾನಾಯಕರಿಗೆ ಕೊಟ್ಟು ಪ್ರಶ್ನೆ ಮಾಡತಕ್ಕಂಥ ವಿಚಾರ ಆಗುವುದಿಲ್ಲ. ಬಹುಶಃ ಕೆಲವು ಸಂದರ್ಭಗಳಲ್ಲಿ ಸಭೆಯ ಹೊರಗಡೆ ಕೆಲವು ಘಟನೆಗಳು ನಡೆದಿರುತ್ತವೆ. ಸಭೆಯ ಹೊರಗಡೆ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಯಾವುದಾದರೂ ಒಬ್ಬ ಸದಸ್ಯ ಈ ಸಭೆಯ ಹೊರಗಡೆ ನಡೆದಿರತಕ್ಕಂಥ ಘಟನೆ ಈ ಒಂದು ಸದನದ ಸದಸ್ಯರ ಯೋಗ್ಯತೆಗೆ ಅನುಸಾರವಾಗಿ ಇಲ್ಲ ಎಂದು ಹೇಳುತ್ತಾ ಇರತಕ್ಕಂಥ ಒಂದು ವಿಚಾರವನ್ನು ಸಭೆಯ ನಾಯಕರ ಗಮನಕ್ಕೆ ತಂದು ಸಭಾಧ್ಯಕ್ಷರ ಗಮನಕ್ಕೆ ತಂದಾಗ ಅದನ್ನು ವಿಚಾರ ಮಾಡಬೇಕಾಗುತ್ತದೆ.

ಮಾನ್ಯ ಮೊಯ್ಲಿಯವರು ಎತ್ತಿರತಕ್ಕಂಥ ಅಂಶ ಇಂಥ ಒಂದು ಸಂದರ್ಭದಲ್ಲಿ,

It is the prerogative of the Speaker to constitute a small parliamentary committee to look in to the matters. But that is in respect of cases which are outside thhe purview of the provisions.

ಸೆಕ್ಷನ್ 27 ಮತ್ತು 191 ಮತ್ತು ನಿಯಮ 27 ಬಹಳ ಸ್ಪಷ್ಟವಾಗಿ ಇದರಲ್ಲಿ ಉದ್ದರಿಸತಕ್ಕಂಥ ಕಾರಣದಿಂದ ತಮ್ಮ ಪರಮೋಚ್ಚ ಅಧಿಕಾರ ಯಾವುದು ಇದೆ, ಆ ಅಧಿಕಾರದ ಅವಧಿಯಲ್ಲಿ 27 ಮತ್ತು 191 ಮತ್ತು ತಮಗಿರತಕ್ಕ ಇನ್‌ಹರೆಂಟ್ ಅಧಿಕಾರದಲ್ಲಿ ಈ ಒಂದು ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕು.

ಈ ಅಧಿಕಾರ ತಮಗೆ ಇದೆ. ಇದು ಸದನದ ಒಂದು ಪ್ರಶ್ನೆ ಆಗಿರುವುದರಿಂದ ಬಹುಶಃ ಮೊಯ್ಲಿಯವರು ಎತ್ತಿರತಕ್ಕಂಥ ವಿಚಾರ ನಿಯಮ 27 ಮತ್ತು 191 ರಲ್ಲಿ

ಬರುವುದಿಲ್ಲ ಎನ್ನತಕ್ಕ ಎಂದು ಸರಿಯಾದುದಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮೊಯ್ಲಿಯವರು ಎತ್ತಿರತಕ್ಕದ್ದು ಈ ಸಭೆಯ ಗಮನಕ್ಕೆ ಬರದೇ ಇರತಕ್ಕಂಥ ವಿಚಾರ, ಯಾವ ಒಬ್ಬ ಸದ್ಯರು ಹೇಳಿ ಅದರ ವಿಚಾರಣೆ ಅಥವಾ ಇನ್‌ವೆಸ್ಟಿಗೇಷನ್ ಅಥವಾ ಎನ್‌ಕ್ವೈರಿ ಅವಶ್ಯಕತೆ ಆಗತಕ್ಕಂಥಾದ್ದು ಮೆಂಬರ್ ಕಾಂಡಕ್ಟ್‌ಗೆ ಸಂಬಂಧಪಟ್ಟ ಹಾಗೆ. ಈ ಸದನ ಕಣ್ಣಾರೆ ಕಂಡಿದ್ದನ್ನು ಮಾನ್ಯ ಮೊಯಿಲಿಯವರು ಹೇಳಿದ ಪ್ರಕಾರ ಮಾಡಬೇಕಾದುದು ಅನಾವಶ್ಯ. ಆದ್ದರಿಂದ ನಾಗೇಗೌಡರು ತಂದಿರತಕ್ಕ ಕ್ರಮಬದ್ಧತೆ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಕ್ರಮಬದ್ಧವಾಗಿ ತಂದಿದ್ದಾರೆ. There is nothing to be argued here.

ಇದು ಒಂದು ಕೆಟ್ಟ ಸಂಪ್ರದಾಯ. ಮಾನ್ಯ ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದ್ದು ಉಂಟು, ಆದರೆ ನಾನು ಕಾಲಿನಲ್ಲಿ ತುಳಿದಿಲ್ಲ ಎಂದು ಮಾನ್ಯ ಸದಸ್ಯರಾರಂಥ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಮೊಯಿಲಿಯವರು ಹೇಳಿದ್ದುದು ಯಾವಾಗ ಬರುತ್ತದೆ ಎಂದರೆ ಮಾನ್ಯ ಸದಸ್ಯರು ಪ್ರಶ್ನೆ ಮಾಡಿದಾಗ, ನಾನು ಹಾಗೆ ಮಾಡಲಿಲ್ಲ ಪ್ರೂವ್ ಮಾಡಿ ಎಂದಾಗ. ಆಪರೆ, ಅವರೇ ಒಪ್ಪಿಕೊಂಡಾಗ ಅದಕ್ಕೆ ಎನ್‌ಕ್ವೈರಿ ಬೇಕಾಗಿಲ್ಲ, ಇನ್‌ವೆಸ್ಟಿಗೇಷನ್ ಬೇಕಾಗಿಲ್ಲ. ಮತ್ತೊಂದು ಬೇಕಾಗಿಲ್ಲ. ಅವರು ರಾಜ್ಯಪಾಲರ ಭಾಷಣವನ್ನು ಕಾಲಿನಲ್ಲಿ ತುಳಿದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ರಾಜ್ಯಪಾಲರು ತಮ್ಮ ಭಾಷಮ ಓದತಕ್ಕಂಥ ಕಾಲದಲ್ಲಿ ಈ ರೀತಿ ಪ್ಯಾರಲಿಲ್ ಸ್ಪೀಚ್ ಅಂದರೆ ಪರ್ಯಾಯ ಭಾಷಣವನ್ನು ಮಾಡತಕ್ಕಂಥಾದ್ದು, ಅದನ್ನು ಹರಿದು ಹಾಕತಕ್ಕಂಥಾದ್ದು,ಇದು ಕೆಟ್ಟ ಸಂಪ್ರದಾಯವೋ, ಸತ್ಸಂಪ್ರದಾಯವೋ ಅದನ್ನು ನಂತರ ಚರ್ಚೆ ಮಾಡೋಣ. ಇದು ಈ ಸಭೆಯಲ್ಲಿ ನಡೆದುಕೊಂಡು ಬಂದಿದೆ. ಇದು ಮೊದಲ ಬಾರಿಗೆ ಆಗುತ್ತಿಲ್ಲ. I agree, we should put an end to such undignified practies.

ಏಕೆಂದರೆ ಈ ಸಭೆಯ ಘನತೆ, ಗೌರವಕ್ಕತಕ್ಕಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ವಾಟಾಳರು ಬಹುಶಃ ನಮಗಿಂತ ಸ್ವಲ್ಪ ಹೆಚ್ಚು ಆವೇಶಪೂರಿತರಾಗಿ ಕೆಲವು ಸಂದರ್ಭದಲ್ಲಿ ನಡೆದುಕೊಳ್ಳುತ್ತಾರೆ. ಒಂದು ಕಾಲದಲ್ಲಿ ಗೋಪಾಲಗೌಡರು ಈ ರೀತಿ ಭಾಷಣವನ್ನು ಹರಿದು ಹಾಕಿದಂಥ ಉದಾಹರಣೆ ಇದೆ. ಆಗ ಅವರಿಗೆ ಈ ಸಭೆ ಶಿಕ್ಷೆಯನ್ನೂ ಕೊಟ್ಟಿತ್ತು. ಆದರೆ ಅವರು ತಮ್ಮ ವಿಷಾದ ವ್ಯಕ್ತಪಡಿಸಿದ ಮೇಲೆ ಅದನ್ನು ಬದಲಾವಣೆಯನ್ನೂ ಮಾಡಿತು. ಅಂದರೆ ಇದು ವಾಟಾಳರು ನಡೆದುಕೊಂಡಿರತಕ್ಕಂಥದ್ದಾಗಲೇ ಅಥವಾ ಎಂ.ಇ.ಎಸ್. ಸದಸ್ಯರು ನಡೆದುಕೊಂಡಿರತಕ್ಕಂಥಾದ್ದಾಗಲೀ ಈ ಸಭೆಗೆ ಗೌರವ ತರುತ್ತದೆ ಎಂದು ನಾನು ಹೇಳಲಾರೆ.

ಬೇರೆ ಯಾವುದೋ ವಿಧಾನ ಸಭೆಯಲ್ಲಿ, ಬೇರೆ ರಾಜ್ಯಗಳಲ್ಲಿ ಇದಕ್ಕಿಂತ ಹೊಲಸಾಗಿ ನಡೆದುಕೊಳ್ಳುತ್ತಾರೆ. ಆದ್ದರಿಂದ ನಾನು ಇದನ್ನು ಜಸ್ಟಿಫೈ ಮಾಡಬೇಕೆಂದು ನನ್ನ ವಾದ ಅಲ್ಲ. ನಾವು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದೇವೆ. ವಾಟಾಳ್ ನಾಗರಾಜರವನ್ನು ಸೇರಿಸಿಕೊಂಡು ಮಾತುಕತೆ ಆಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಏತಕ್ಕೆಂದರೆ ಸಂಪ್ರದಾಯ ಆ ರೀತಿ ನಡೆದುಕೊಂಡು ಬಂದಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈವೊತ್ತು ಅವರಿಗೆ ಶಿಕ್ಷೆ ಕೊಡುವುದರಿಂದ ಇದು ಮುಗಿಯುತ್ತದೆಂದು ನನಗನ್ನಿಸುವುದಿಲ್ಲ. ನಾವು ಹೊಸ ಸಂಪ್ರದಾಯ ಹಾಕುವಾದರೆ ಈ ರೀತಿ ಆಗತಕ್ಕದ್ದು ಅಲ್ಲ. ಇದು ಸಭೆಗೆ ಗೌರವ ತರತಕ್ಕದ್ದಲ್ಲ. ಮಾನ್ಯ ನಾಗೇಗೌಡರು ಹೇಳಿದರು. ಹೋದಸಾರಿ ಅಸೆಂಬ್ಲಿಯಲ್ಲಿ ನಾನು ಯಾವುದೋ ಒಂದು

ಸಂದರ್ಭದಲ್ಲಿ ಏನೋ ಒಂದು ಪದವನ್ನು ಉಪಯೋಗಿಸಿದ್ದೇನಂತೆ, ನಾನು ಅದಕ್ಕೆ ಕ್ಷಮೆ ಕೇಳಿಕೊಂಡನಂತೆ. ನಾನು ಅದನ್ನು ಮರೆತುಬಿಟ್ಟಿದ್ದೇನೆ. ಮಾನ್ಯ ವಾಟಾಳ್ ನಾಗರಾಜರವರು ಇದಕ್ಕೆ ಈವತ್ತು ಮುಕ್ತಿ ಮಾಡುತ್ತಾರೆ. ಇದಕ್ಕೆ ಹೆಚ್ಚಿಗೆ ವಾದ ವಿವಾದ ಬೇಕಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ಯಾರೇ ಆಗಲಿ ತಪ್ಪು ಮಾಡಿದರೆ ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಹಿಂದೆ ನಾನು ಕೂಡ ವಿಷಾದ ವ್ಯಕ್ತಪಡಿಸಿದ್ದೇನೆ. ಕೆಲವೊಮ್ಮೆ ಸಭೆಯ ಅಭಿಪ್ರಾಯದಲ್ಲಿ ಒಬ್ಬ ಸದಸ್ಯರ ಮಾಡಿದ್ದು ಸಭೆಯ ಘನತೆಗೆ ತಕ್ಕುದ್ದಲ್ಲವೆಂಬ ಭಾವನೆ ಬರುತ್ತದೆ. ಹರಿದು ಹಾಕಿ ಮಾಡತಕ್ಕದ್ದು ಸರಿಯಲ್ಲ.

(INTERRUPTION)

ನಾನು ತಮಗೆ ವಿನಂತಿಸಿಕೊಳ್ಳುತ್ತಿದ್ದೇನೆ ಹೊರತು ಆರ್ಡರ್ ಮಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ಹಿರಿಯ ಅನುಭವಿ ಸದಸ್ಯರಾದ ನಂಜೇಗೌಡರು ಹೇಳಿದಂತೆ ಸತ್‌ಸಂಪ್ರದಾಯಗಳನ್ನು ಹಾಕಿಕೊಳ್ಳಬೇಕು ಹಿಂದೆ ಇದ್ದುದ್ದನ್ನು ಬದಲಾವಣೆ ಮಾಡಬೇಕು, ಅದೇ ರೀತಿ ಮುಂದುವರಿಯಬಾರದು ಎಂಬುದಕ್ಕೆ ಬಹುಶಃ ಈ ಸದನದಲ್ಲಿ ಯಾವುದೇ ಭಿನ್ನಭಿಪ್ರಾಯ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಿದ್ದಾರೆ, ಸಾಕಷ್ಟು ಅನುಭವ ಹೊಂದಿರುತ್ತಾರೆ. ರಾಜ್ಯಪಾಲರ ಭಾಷಣದ ವ್ಯವಸ್ಥೆ ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ವ್ಯಕ್ತಿ ಅವರು. ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದುಹಾಕಿದ್ದು ಏತಕ್ಕೆಂದರೆ ಅದು ಹಳೆಯ ಕಾಲದಗೊಡ್ಡು ಸಂಪ್ರದಾಯ, ಅದು ಬೇಡ ಎಂದು ಅವರ ವಾದ. ಅದಕ್ಕೆ ನಾನು ಹೇಳತಕ್ಕದ್ದು ಏನೆಂದರೆ ಈಗ ಹೊಸದಾಗಿ ಸರ್ಕಾರ ಬಂದಿದೆ. ಹೊಸದಾಗಿ ಶಾಸಕರು ಆಯ್ಕೆಯಾಗಿ ಬಂದಿದ್ದಾರೆ.

ಇದು ಸರಿಯಲ್ಲ ಎನಿಸಿದಾಗ ಹೊಸದಾಗಿ ಬಂದಿರುವ ಸರ್ಕಾರ ಮಾನ್ಯ ಸದಸ್ಯರನ್ನು ಒಳಗಡೆ ಕರೆದು ಸತ್ಯಂ ಪ್ರದಾಯವನ್ನು ಹಾಕಿಕೊಂಡು ಹೋಗೋಣ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡೋಣ ಎಂಬ ಒಂದು ಸಂಪ್ರದಾಯವನ್ನು ಅನುಸರಿಸಬೇಕೆಂದು ಇದನ್ನೇ ಒಂದು ಪ್ರಿಸ್ಟೀಜ್ ಎಂದು ತೆಗೆದುಕೊಂಡು ವಾಟಾಳ್ ನಾಗರಾಜ್‌ರವರನ್ನು ಬಗ್ಗಿಸಿದೆವು, ಇಕ್ಕಟ್ಟಿಗೆ ಸಿಕ್ಕಿಸಿದೆವು ಎಂಬುದು ಬೇಡ. ಒಳ್ಳೆಯ ಒಂದು ಸಂಪ್ರದಾಯ ಇಲ್ಲಿ ಇದುವರೆಗೆ ನಡೆದುಕೊಂಡು ಬಂದಿದೆ. ಇನ್ನು ಮುಂದೆಯೂ ಕೂಡ ಅದನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು. ಸದನಕ್ಕೆ ಅಗೌರವ ಆಗುವ ರೀತಿಯಲ್ಲಿ ನಡೆದುಕೊಳ್ಳಬಾರದೆಂಬುದಕ್ಕೆ ತಾವು ಕ್ರಮ ತೆಗೆದುಕೊಳ್ಳಬಹುದು, ತಾವು ನಿರ್ಣಯ ತಂದಿದ್ದಾರೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳುವುದು ಒಳ್ಳೆಯದೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಮುಂದೆ ಈ ರೀತಿ ಅನೇಕ ವಿಷಯಗಳ ಬಗ್ಗೆ ತಾವು ತಮ್ಮ ಕೊಠಡಿಯಲ್ಲಿ ಕರೆದು ಸತ್‌ಸಂಪ್ರದಾಯವನ್ನು ಕಾಪಾಡಿಕೊಂಡು ಹೋಗಬೇಕೆಂಬುದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಪ್ರಾರಂಭದಲ್ಲಿ ಯಾವುದೋ ಒಬ್ಬ ಸದಸ್ಯರನ್ನು ಬಗ್ಗಿಸಬೇಕೆಂದಿದ್ದರೆ ಆದರಿಂದ ನೀವು ಏನೂ ಸಾಧನೆ ಮಾಡಿದಂತಾಗುವುದಿಲ್ಲ. ಇದರಿಂದ ಯಾವುದೂ ಕೊನೆಯಾಗುವುದಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ನಾಗೇಗೌಡರಿಗೆ ವಿನಂತಿಸುವುದು.

ಅಧ್ಯಕ್ಷರು : ಬಗ್ಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅವರು ಹೇಳಿದರೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ನನ್ನ ಅಭಿಪ್ರಾಯ.ಇವತ್ತು ಸದನದಲ್ಲಿ ಯಾವುದೋ ಪ್ರಮುಖ ವಿಷಯ ಪ್ರಸ್ತಾಪವಾಗಬೇಕಾಗಿತ್ತು. ಈ ಸಂದರ್ಭದಲ್ಲಿ ಆಡಳಿತ ಪಕ್ಷದವರು ಇದನ್ನು ತಂದಿರಬಹುದು. ಅದು ಅವರಿಗೆ ಬಿಟ್ಟಿದ್ದುದು. ನಾನು ತಮ್ಮ ಮೂಲಕ ವಿನಂತಿ ಮಾಡುವುದು ಇದನ್ನು ಕೊಠಡಿಯಲ್ಲಿ ಕುಳಿತುಕೊಂಡು ಸರಿಮಾಡುವಂತ

ಪ್ರಯತ್ನ ಮಾಡಬೇಕೆ ಹೊರತು ಈ ರೀತಿ ಎಳೆಯುವಂತ ಅಗತ್ಯ ಇಲ್ಲವೆಂದು ನನ್ನ ಸಲಹೆ. ಶಿಕ್ಷೆ ಆಗಬೇಕೆಂದು ವಾದ ಮಾಡುವುದಾದರೆ ನನ್ನ ಅಭ್ಯಂತರ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರು ಈ ಒಂದು ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳತಕ್ಕದ್ದು ಸೂಕ್ತ ಹಾಗೂ ಈ ವಿಚಾರವನ್ನು ತಮ್ಮ ಕೊಠಡಿಯಲ್ಲಿ ಮಾತನಾಡಿದ್ದರೆ ಹೆಚ್ಚು ಅರ್ಥ ಇರುತ್ತಿತ್ತು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದನ್ನು ಮನಗಾಣಬೇಕು.

ಮಾನ್ಯ ವಾಟಾಳ್ ನಾಗರಾಜರವರು ಈ ರಾಜ್ಯದಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿ. ಅವರು ಇಲ್ಲಿ ನಡೆದುಕೊಂಡ ರೀತಿ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಬರೀ ನಾಲ್ಕು ಕೋಟಿ ಜನರು ಅಲ್ಲ. ಕರ್ನಾಟಕ ವಿಧಾನಮಂಡಲದ ಜಂಟಿಅಧಿವೇಶನ, ರಾಜ್ಯಪಾಲರ ಭಾಷಣ, ಇದನ್ನು ರಾಷ್ಟ್ರೀಯ ಪತ್ರಿಕೆಗಳಲ್ಲಿ ಓದಿದ್ದೇನೆ. ಒಂದು ಕೊಠಡಿಯಲ್ಲಿ ನಡೆದ ವಿಚಾರ ಆಗಿದ್ದರೆ ಕೊಠಡಿಯಲ್ಲಿ ಕರೆದು ಮಾತನಾಡಿದ್ದರೆ ನಮ್ಮ ಅಭ್ಯಂತರ ಇರುತ್ತಿರಲಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಯಾರಿಗೂ ಬಗ್ಗುವ ವ್ಯಕ್ತಿ ಅಲ್ಲ. ಅವರು ಪೋಲೀಸರಿಗೆ ಬಗ್ಗಲಿಲಲ್ಲ. ಇನ್ನು ನಮ್ಮಂತರ ಪುಟ್ಟಕೋಸಿಗಳಿಗೆ ಬಗ್ಗುವುದಿಲ್ಲ. ಅವರನ್ನು ಬಗ್ಗಿರುವ ವಿಷಯವೂ ಇಲ್ಲ. ನಾವು ಪ್ರಸ್ತಾಪ ಮಾಡತಕ್ಕದ್ದು ಈ ಸದನದ ನಡವಳಿಕೆ ಪ್ರಶ್ನೆ ಈ ಸದನದ ಗೌರವದ ಪ್ರಶ್ನೆ. ಇದು ಬಹಿರಂಗವಾಗಿರತಕ್ಕ ಪ್ರಶ್ನೆ ಪತ್ರಿಕೆಯಲ್ಲಿ ಬಂದಿರತಕ್ಕ ಪ್ರಶ್ನೆ, ಬಹಿರಂಗವಾಗಿ ಚರ್ಚೆಯಾಗದಿದ್ದರೆ ನಾವು ಪ್ರಸ್ತಾಪ ಮಾಡುತ್ತಿರಲಿಲ್ಲ. ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ. ಆ ಒಂದು ಉದ್ದೇಶದಿಂದ ನಾನು ಈ ಸೂಚನೆಯನ್ನು ತಂದಿದ್ದೇವೆಂದು ಹೊರತು ಅವರನ್ನು ಬಗ್ಗಿಸುವ ವಿಚಾರ ಇಲ್ಲ ಮತ್ತೊಂದಿಲ್ಲ.

ಡಾ॥ ಜೀವರಾಜ ಆಳ್ವ : ನನ್ನ ಸಂದೇಹ ಏನೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ನಾಗೇಗೌಡರು ಇಬ್ಬರೂ ಮಾತನಾಡಿಕೊಂಡು ಈ ಹಕ್ಕುಚ್ಯುತಿ ನಿರ್ಣಯವನ್ನು ತಂದಿದ್ದಾರೆಂದು ಅನ್ನಿಸುತ್ತದೆ.

ಅಧ್ಯಕ್ಷರು : ಇದರಲ್ಲಿ ನೀವು ಅನುಭವಸ್ಥರು.

ಡಾ॥ ಜೀವರಾಜ ಆಳ್ವ : ತಾವು ಗಮನಿಸಬೇಕು.

(INTERRUPTIONS)

ಕ್ಷಮೆ ಕೇಳಬೇಕು, ಇದೊಂದು ಕನ್‌ವೆನ್ಷನ್ ಅಂದರೆ ಏನು ಸಂಪ್ರದಾಯ ಎಂದರೇನು? ಹಲವಾರು ವರ್ಷಗಳಿಂದ, 10-12 ವಿಧಾನ ಸಭೆಗಳಿಂದ ರೂಲ್ಸ್ ಆಫ್ ಪ್ರೊಸೀಜರ್ ಇದೆ. ಕಾನವೆನ್ಷಿನ್ ಅಂತ ಒಂದು ನಡೆದುಕೊಂಡು ಬಂದಿದೆ. ಸಂಪ್ರದಾಯ ನಡೆದು ಬಂದಿದೆ. ಎಂ.ಇ.ಎಸ್. ಅವರದ್ದು ನಡೆದು ಬಂದಿದೆ. ನೀವು ರೂಲ್ಸ್ ಆಫ್ ಪ್ರೊಸೀಜರ್ ಇದರ ಬಗ್ಗೆ ಹೋಗುವುದಾದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಕ್ಷಮೆ ಕೇಳಬೇಕೆಂದು ಹೇಳುವುದು ಅವರ ಒಂದೂವರೆ ಗಂಡೆ ಭಾಷಣ ಕೇಳುವುದು ಇದೆಲ್ಲ ನಡೆಯಬೇಕಾಗುತ್ತೆ. ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಿಸಿದಂತಹ ನಿಲುವಳಿ ಸೂಚನೆ ಇತ್ತು. ಲ್ಯಾಪ್ಸ್ ಆಗಿ ನಾಳೆ ಬರುವುದು, ಇದು Ultimately very precious time of the will be taken away for some other propose.

ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರಂಥ ವ್ಯಕ್ತಿ ಈ ಒಂದು ವ್ಯವಸ್ಥೆಯನ್ನು ವಿರೋದ ಮಾಡಿಕೊಂಡು ಬಂದಿದ್ದಾರೆ. ರಾಜ್ಯಪಾಲರ ಭಾಷಣ ಇರಬಾರದೆಂದು ಹೇಳಿದ್ದಾರೆ. ಬಹಳ ಕಟ್ಟುನಿಟ್ಟಾಗಿ ಹೇಳಿದ್ದಾರೆ, ಪ್ರತಿ ವಿಧಾನಸಭೆಯಲ್ಲಿಯೂ ಹೇಳಿಕೊಂಡು

ಬಂದಿದ್ದಾರೆ ಈವತ್ತು ಸದನದ ಆಸ್ತಿ ಅಂತ ಹೇಳುತ್ತೀರಿ ಕನ್‌ವೆನ್ಷನ್ ಅಂತ ಹೇಳುತ್ತೀರಿ.

ತಾವು ಸಭಾಧ್ಯಕ್ಷರಾಗಿದ್ದಾಗ was there any sanctity in the House?

12 ಟಿ.ವಿ. ಕ್ಯಾಮರಗಳು ಇದ್ದು ಒಬ್ಬೊಬ್ಬರಿಗೆ ಫೋಸ್ ಕೊಟ್ಟುಕೊಂಡು ಓಡಾಡುತ್ತಿದ್ದರು. ಇಡೀ ರಾಜ್ಯಪಾಲರ ಭಾಷಣದ ಪೂರ್ಣ ಸಮಯ ಈ 12 ಕ್ಯಾಮರ ಮೆನ್‌ಗಳು ತೆಗೆದುಕೊಂಡಿದ್ದರು. Is it sanctity?

ಇದಕ್ಕೆ ನನಗೆ ಉತ್ತರ ಕೊಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ಈ ಒಂದು ವ್ಯವಸ್ಥೆಯನ್ನು ವಿರೋಧ ಮಾಡಿಕೊಂಡು No. It is wrong. There is sanctity of the House and if you have to admit.

SRI R.V. DESHAPANDE : What is the privilege involved?

DR. JEEVARAJ ALVA : I am entitled for my opinion. Thee entire sanctity and dignity of the House was maligned. ಮಾನ್ಯ ರಾಜ್ಯಪಾಲರು ಹೋಗುತ್ತಿರುವಾಗ ಕ್ಯಾಮರ ಮೆನ್‌ಗಳು ಕ್ಯೂ ನಿಂತಿದ್ದರು. ಅವರು ಹೋಗುವುದಕ್ಕೂ ಕೂಡ ಆಗುತ್ತಿರಲಿಲ್ಲ. There is convention, there is tradition.

ರಾಷ್ಟ್ರಗೀತೆ ಮಾಡುವಾಗ ಕೂಡ ಈ ಕ್ಯಾಮರಮೆನ್‌ಗಳು. ಪಬ್ಲಿಸಿಟಿ ಬೇಕು, ಮೀಡಿಯ ಬೇಕು. ಕ್ಯಾಮರಾಮೆನ್‌ಗಳಿಗೆ 2-3 ನಿಮಿಷ ಕೊಡಿ. ಇಡೀ ಭಾಷಣ ಪೂರ್ಣ ಸಮಯದಲ್ಲಿ ಹತ್ತಾರು ಜನರು ಓಡಾಡುತ್ತಿದ್ದರೆ Are you proud of it? I am sure you are not.

ಮಾನ್ಯ ದೇಶಪಾಂಡೆಯವರು ಹೇಳಬಹುದು, ನನ್ನ ಮಿತ್ರರು ಹೇಳಬಹುದು. This absolutely wrong.

ಈಗ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಮಾನ್ಯ ನಾಗೇಗೌಡರಲ್ಲಿ ಮತ್ತು ಇತರ ಮಾನ್ಯ ಸದಸ್ಯರಲ್ಲಿ ಸಭಾನಾಯಕರ ಮೂಲಕ ಕೇಳಿಕೊಳ್ಳುತ್ತಿದ್ದೇನೆ, ದಯವಿಟ್ಟು ಸಮಯ ಹಾಳುಮಾಡಬೇಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ಒಂದೂವರೆ ಗಂಟೆ ಉತ್ತರ ಕೊಡುತ್ತಾರೆ. ಏಕೆಂದರೆ He has to fight., code of conduct, House conduct apart. ಅದರಲ್ಲಿ ರಿಚಿಯಲಿಸ್ಟಿಕ್, ಅಕಾಡೆಮಿ ಎಕ್ಸ್‌ಸೈಜ್ ಮಾಡಿ ಮೊಯಿಲಿಯವರು ಎದ್ದೇಳುವುದು ಖರ್ಗೆಯವರು ಎದ್ದೇಳುವುದು ಬಂಗಾರಪ್ಪನವರು ಎದ್ದೇಳುವುದು ಇದೆಲ್ಲ ಆದಮೇಲೆ It will be the entire deliberation of the House while will be hijacked. If that is the view of the House ultimately ಮಾನ್ಯ ಸಭಾನಾಯಕರವರು ಹೇಳುತ್ತಾರೆ ವಾಟಾಳ್ ನಾಗರಾಜ್‌ರವರು ಕ್ಷಮೆ ಕೇಳಲಿ ಎಂದು ಆದರೆ ಅವರು ಕ್ಷಮೆ ಕೇಳುವುದಿಲ್ಲ ಎನ್ನುತ್ತಾರೆ. The House might decide by vote or by your decision but it is futile. ಆದ್ದರಿಂದ ನಾನು ತಮ್ಮಲ್ಲಿ, ಸಭಾನಾಯಕರಲ್ಲಿ ಮತ್ತು ಮಾನ್ಯ ನಾಗೇಗೌಡರಲ್ಲಿ ಪ್ರಾರ್ಥಿಸುತ್ತೇನೆ. because he has moved the resolution. I am not getting into controversy whether it is bonafide or by rule but I feel its very bonafide because there is a light suspicion.

ಏನೋ ಒಂದು ಕಾರಣ ಕಾಣುತ್ತದೆ. It does not look nice. ಏಕೆಂದರೆ ಮಾನ್ಯ ವಾಟಾಳ್ ನಾಗರಾಜರವರು ನಾಗೇಗೌಡರು ಬಂದು ಕೂರುತ್ತಾರೆ. ಇಲ್ಲಿ ಅತ್ಯಂತ ಕೆಳವಯಸ್ಸಿನ ವ್ಯಕ್ತಿ ಅವರು ಅಂತರಿಕ್ಷದಿಂದ ಬಂದಿದ್ದಾರೆಂದು ತೋಳುತ್ತಾರೆ. It looks

dramatic. To me ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ವ್ಯಕ್ತಿ ಕನ್ನಡಕ್ಕೋಸ್ಕರ ಹೋರಾಡುತ್ತಾರೆ ಆದರೆ ಹೈಜಾಕ್ ಆಗಬಾರದು. ನನ್ನ ಪ್ರಾರ್ಥನೆ ಇಷ್ಟೆ. ನಾಗೇಗೌಡರ ಹತ್ತಿರ.

ಅಧ್ಯಕ್ಷರು : ಡ್ರಾಮೆಟಿಕ್ ಆಗಿ ನೀವು ಹೌಸ್‌ನಲ್ಲಿದ್ದಾಗ ನೀವು ಬೇರೆ ಯಾರಿಗೆ ಮಾಡುವುದಕ್ಕೆ ಅಧಿಕಾರ ಇದೆ? ಬೇರೆ ಯಾರೂ ಮಾಡುವುದಿಲ್ಲ. That is only your privilege.

ಡಾ॥ಜೀವರಾಜ ಆಳ್ವ : ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ, ಮಾನ್ಯ ನಾಗೇಗೌಡರು ಇದನ್ನು ವಿತ್‌ಡ್ರಾ ಮಾಡಿ ಎಂದು ಮಾನ್ಯ ಸಭಾನಾಯಕರು ಅವರಿಗೆ ಸೂಚನೆ ಮಾಡಿದರೆ ಒಳ್ಳೆಯದು. ದಯವಿಟ್ಟು ವಿತ್‌ಡ್ರಾ ಮಾಡಿ, ಇದನ್ನು ಮುಂದುವರೆಸಿಕೊಂಡು ಹೋಗುವುದು ಬೇಡ. ಮಾನ್ಯ ನಂಜೇಗೌಡರು ಕನ್‌ವೆನ್ಸ್‌ನ್ ಬಗ್ಗೆ ಹೇಳಿದರು ಮುಂದೆ ಏನಾಗಬೇಕೆಂದು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಪ್ರಾರ್ಥನೆ ಮಾಡಿಕೊಳ್ಳೋಣ. ಅವರು ಇಲ್ಲಿ ಕ್ಷಮೆ ಕೇಳಬೇಕು. ಪ್ರಿವಲೇಜ್‌ಗೆ ಹೋಗಬೇಕು ಅಂದರೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಬೇಡ ಎನ್ನುತ್ತಾರೆಂದು ನನಗನ್ನಿಸುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಮಾನ್ಯ ನಾಗೇಗೌಡರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದೊಂದು ವಿಶೇಷವಾದ ಚರ್ಚೆ, ಇದರ ಉದ್ದೇಶ ಯಾರನ್ನು ದ್ವೇಷ ಮಾಡುವುದಕ್ಕೆ ಯಾರಿಗೋ ಶಿಕ್ಷೆ ಕೊಡುವುದಕ್ಕೆ ಅಲ್ಲ. ಮಾನ್ಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ರವರನ್ನು ನಾವು ಇಲ್ಲಿ ಸಾಂಕೇತಿಕವಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ. ಈ ಸದನಕ್ಕೆ ಕೆಲವರು ಹೊಸದಾಗಿ ಬಂದಿರತಕ್ಕ ಸದಸ್ಯರು ಇದ್ದಾರೆ, ಬಹಳ ಅನುಭವಿಗಳು ಇದ್ದಾರೆ.

1.40 ಪಿ.ಎಂ

ಆದರೆ ಈ ಸದನದ ಚಹರೆ ದಿನ ದಿನಕ್ಕೆ ಬಹಳ ಕೆಡುತ್ತಾ ಇದೆ. ಅದು ಲೋಕ ಸಭೆ ಆಗಲಿ, ರಾಜ್ಯ ಸಭೆ ಆಗಲಿ, ಕರ್ನಾಟಕ ವಿಧಾನ ಸಭೆ ಅದರದೇ ಅದಂಥ ಒಂದು ವಿಶೇಷತೆ ಉಳಿಸಿಕೊಂಡು ಬಂದಿದೆ. ಈಗಲೂ ಉಳಿಸಿಕೊಂಡು ಬಂದಿದೆ. ಬೇರೆ ಯಾವುದೇ ವಿಧಾನ ಸಭೆಯ ಕಲಾಪಗಳಿಗೂ ನಮ್ಮ ವಿಧಾನ ಸಭಾ ಕಲಾಪಕ್ಕೂ ಹೋಲಿಸಿದರೆ ನಾವು ಬಹಳ ಉತ್ತಮವಾಗಿ ಕಲಾಪಗಳಿಗೂ ನಮ್ಮ ವಿಧಾನ ಸಭಾ ಕಲಾಪಕ್ಕೂ ಹೋಲಿಸಿದರೆ ನಾವು ಬಹಳ ಉತ್ತಮವಾಗಿ ಕಲಾಪದಲ್ಲಿ ಭಾಗವಹಿಸುವುದು ಮಾತ್ರ ಅಲ್ಲ ವಿಷಯಗಳ ಚರ್ಚೆಯ ಮಟ್ಟ ಅದು ಬಹಳ ಎತ್ತರದಲ್ಲಿರುತ್ತದೆ. ಅದನ್ನು ನೋಡಿದ್ದೇನೆ. ಹತ್ತಾರು ವರ್ಷಗಳಿಂದ ಮೆಂಬರುಗಳಾಗಿ, ಲೋಕಸಭಾ ಸದಸ್ಯರಾಗಿ, ಬೇರೆ ಕಡೆ ಏನೇನು ನಡೆಯುತ್ತದೆ ಎಂಬುದನ್ನು, ಆದರೆ ನಿನ್ನೆ ನಡೆದ ಘಟನೆ ಹೊಸದೇನು ಅಲ್ಲ. ಅದು ಹಾಗೆ ನಡೆದುಕೊಂಡು ಬರುವುದೇ ಒಂದು ಒಳ್ಳೆಯದು ಎನ್ನುವ ತರಹ ಒಂದು ಭಾವನೆ ಆಗಬಾರದು. ಹಾಗೆ ವರ್ತಿಸುವುದೇ ಒಂದು ದೊಡ್ಡ ಪಾರ್ಲಿಮೆಂಟೇರಿಯನ್ ಸಿಸ್ಟಂ ಎಂದು ಆಗಬಾರದು. ಅದನ್ನು ಎಲ್ಲಿಯಾದರೂ ದೇಶದಲ್ಲಿ ಪ್ರಾರಂಭ ಮಾಡಬೇಕಲ್ಲ? ಇವತ್ತು ನಾವೆಲ್ಲರೂ ವಾಟಾಳ್ ಅವರ ಉದ್ದೇಶ ಅವರೇನು ಕೆಡಕು ಮಾಡುವುದಕ್ಕೆ ಅಥವಾ ಸದನಕ್ಕೆ ಅಗೌರವ ಮಾಡುವುದಕ್ಕೆ ಅಂತ ಮಾಡಿಲಿಲ್ಲ ಆದರೆ ಆ ತರಹ ಮಾಡುವುದು ಅದನ್ನೆ ಸತ್ಸಂಪ್ರದಯ ಅಥವಾ ಅವಶ್ಯಕವಾದಂತ ಬಿಹೇವಿಯರ್ ಅಂತ ತಿಳಿದುಕೊಂಡರೆ ತಪ್ಪಾಗುತ್ತದೆ. ಚರ್ಚೆ ಮಾಡುವುದಕೊಸ್ಕರ ನಾವು ಇದನ್ನು ಮಾಡುತ್ತಿದ್ದೇವೆ. ಗೋಪಾಲಗೌಡರ ಸುದ್ದಿ ಬಂತು. ಅವರು ಏನು ಮಾಡಿದರು ಎಂಬುದು ರೆಕಾರ್ಡ್

ಇದೆ. ಆದರಿಂದ ಅವರಿಗೆ ಶಿಕ್ಷೆಯಾಯಿತು. ಗಾಂಜಿ ವೀರಪ್ಪನವರು ಮೂವ್ ಮಾಡಿದರು. ಆಮೇಲೆ ಶಿಕ್ಷೆಯಾಯಿತು. ಅದಕ್ಕಿಂತ ಬಹಳ ಸೂಕ್ಷ್ಮವಾಗಿ ಇನ್ನು ಒಂದು ಘಟನೆ.

"On 6th March, 1096, Hon'ble Member Sri Gopala Gowda dragged an official reporter in to the House when the House was sitting. Hon'ble Member Smt. Nagaratnamma Hiremath wrote a letter to the Speaker enquiring whether it was in order fro a member to drag a reporter in to the House. The speaker endorsed on that letter as follows : "Sri Gopala Gowda may peruse and return" An official took the letter and gave it to the Hon'ble Member Sri Gopala Gowda, who was in the lobby. Hon'ble Member Sri Gopala Gowda, who was in the lobby. Hon'ble Member Sri Gopala Gowda read the letter, tore it and threw away. The official came back to the House and reported the matter to the Speaker. The Speaker sent for the Hon'ble Member Sri Gopala Gowda and on his arrival, enquired as what he did with the letter sent to him for perusal and return. Hon'ble Member Sri Gopala Gowda Stated that he read that letter, tore it and threw away and also stated that he was prepared to take to consequences. On 8th March 1965 Hon'ble Member Smt. Nagaratnamma Hiremath raised the matter of privilege. the behaviour of Hon'ble Member Sri Gopal Gowda Would amount to contempt of the House and therefore should be referred to the Committee of privileges. The House approved the motion and the matter was referred to the Committee." He tore a letter outside in the lobby and threw it away and come in the House and said "Yes, I did it, I am prepared to take the consequences." Then the Committe was constituted. The Committee decided to find out from the Hon'ble Member Sri Gopala Gowda as to what he had to say in the matter. Then Hon'ble Speaker and the Hon'ble Member Smt Nagaratnamma Hiremath called for explanation from the Member.Sri Gopala Gowda sent a reply stating that he had realised that it was improper on his part to tear the letter sent by the Hon'ble Speaker and that he regretted for the act and he also apologised to the House."

This is what happened in 1965.

ಸ್ವಾಮಿ, ನಾವೆಲ್ಲಾ ಬಹಳ ಶಿಸ್ತಿನಿಂದ ಕಾನೂನು ಪ್ರಕಾರ ನಡೆದುಕೊಂಡಂಥ ಸದಸ್ಯರು ಎಂದು ನಾನು ಏನೂ ಹೇಳುವುದಿಲ್ಲ. ಹಲವಾರು ಸಾರಿ ಹಲವಾರು ರೀತಿಯಲ್ಲಿ ಕಾನೂನನ್ನು ಮುರಿದಿದ್ದೇವೆ, ಪ್ರತಿಭಟಿಸಿದ್ದೇವೆ, ಧರಣಿ ಕುಳಿತಿದ್ದೇವೆ. ಮಾರ್ಷಲ್ ನಿಂದ ಹೊರಗಡೆ ಹಾಕಿಸಿ ಕೊಂಡಿದ್ದೇವೆ. ಕೆಲವು ಸಾರಿ ದಿನಗಟ್ಟಲೆ ಅಸೆಂಬ್ಲಿಯ ಹೊರಗಡೆ ಧರಣಿ ಮಾಡಿದ್ದೇವೆ. ಇದೆಲ್ಲಾ ಮಾಡಿದ್ದೇವೆ. ಆದರೆ ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಸದನದಲ್ಲಿ ನಡೆಯತಕ್ಕ ವಿಚಾರಗಳು ನಾವು ಅದಕ್ಕೆ ಕೊಡತಕ್ಕ, ಅದನ್ನು ನೋಡತಕ್ಕ ಆಟಿಟ್ಯೂಡ್ ಏನಿದೆ ಅದು ಬಹಳ ಹಗುರ ಆಗಿಬಿಟ್ಟಿದೆ. ಯಾವ ವಿಷಯ ಆದರೂ ಮಹಾರಾಷ್ಟ್ರ ವಿಕೀಕರಣ ಸಮಿತಿಯವರು ಪ್ರತಿ ವರ್ಷ ರಿಚಿಯಲಿಸ್ಟಿಕ್ಕಾಗಿ ಮಾಡುತ್ತಾರೆ. ಆದರೆ ಏನು ಉದ್ದೇಶ?ಪ್ರಜಾತಂತ್ರದಲ್ಲಿ

ಪ್ರತಿಭಟನೆ ಮಾಡತಕ್ಕ ಹಕ್ಕನ್ನು ಯಾರೂ ಕಸಿದುಕೊಳ್ಳಕೂಡದು. ಆದರೆ ಹೇಗೆ? ಈ ಸದನವನ್ನು ನಡೆಸುವುದಕ್ಕೆ ಒಂದು ನಿಮಿಷಕ್ಕೆ 50-60 ಸಾವಿರ ರೂಪಾಯಿ ಖರ್ಚಾಗುತ್ತದೆ. ಅದು ಪಬ್ಲಿಕ್ ಮನಿ. ಏಕೆ ಹೀಗೆ ಮಾಡುತ್ತೇವೆ ನಾವು? ಇದನ್ನು ನಮ್ಮಷ್ಟಕ್ಕೆ ನಾವು ನೋಡಿಕೊಳ್ಳುವುದಕೊಸ್ಕರ ನಾಗರಾಜುರವರ ಹೆಸರು ತಗೊಂಡಿದ್ದೇವೆಯೇ ಹೊರತು ಅವರ ಮೇಲಿನ ದ್ವೇಷಕ್ಕೆ ಅಲ್ಲ. ಆದ್ದರಿಂದ ಇದನ್ನು ಹೆಚ್ಚು ಬೆಳಸಬಾರದು ಎನ್ನುವ ಮಾತನ್ನು ಒಪ್ಪುತ್ತೇನೆ. ಆದರೆ ಇದು ಈ ಸದನದಲ್ಲಿ ಏತಕ್ಕೆ ಚರ್ಚೆ ಆಗಬೇಕು ಎಂಬುದನ್ನು ನಾಗೇಗೌಡರು ಹೇಳಿದರು. ಇದು ಏನು ಪ್ರವೈಟ್ ಆಗಿ ಅವರನ್ನು ಕರೆದುಕೊಂಡು ಸ್ಪೀಕರ್ ಹತ್ತಿರ ಕುಳಿತು ಹೇಳುವುದು ಅಲ್ಲ. ಅದು ಅವರ ಒಬ್ಬರ ಪ್ರಶ್ನೆ ಅಲ್ಲ. ಸದನದ ಪ್ರತಿಯೊಬ್ಬ ಸದಸ್ಯನ ಕರ್ತವ್ಯ ಮತ್ತು ಜವಾಬ್ದಾರಿ. ಅದನ್ನು ಇವತ್ತು ನಾವು ತಿಳಿದುಕೊಳ್ಳಬೇಕು. ಹೀಗಾದರೆ ಇಡೀ ವರ್ಷದಲ್ಲಿ ಹೇಗೆ? ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ಸರ್ಕಾರದ ಮೇಲೆ ಹೇಳುತ್ತಿಲ್ಲ. ಈ ಸದನದಲ್ಲಿ ಸುಮಾರು ಪಾರಗಟ್ಟಲೆ ಯಾವುದೇ ಜನತೆಗೆ ಸಂಬಂಧಪಡದೆ ಇರತಕ್ಕಂಥ ವಿಷಯಗಳನ್ನು ಚರ್ಚೆ ಮಾಡಿ ದಾಂಧಲೆ ಮಾಡಿ ಮಾರುಕಟ್ಟೆಯಲ್ಲಿ ಇರುವಂತೆ ಮಾಡಿದರೆ ಜನ ಇವತ್ತು ನಮ್ಮ ನೋಡಿ ನಗುತ್ತಾರೆ. ಇಂಥ ವಿಧಾನಸಭೆಯಲ್ಲಿ ಬಹಳ ಗಲಾಟೆ, ಗಲಾಟೆ ಎಂದರೆ ಒಳಗಿನ ಗಲಾಟೆ ಆ ತರಹ ದೃಶ್ಯಗಳನ್ನು ಜನ ನೋಡಬಾರದು.

ಶ್ರೀ ವಾಟಾಳ್ ನಾಗರಾಜ್ : ಯಾವ ಸರ್ಕಾರ? ಹೇಗೆ ಆಯಿತು?

ಶ್ರೀ ಜೆ.ಹೆಚ್. ಪಟೇಲ್ : ಡೇಟ್, ಟೈಮು ಆಮೇಲೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇಂಥ ಸರ್ಕಾರ ಎಂದು ಹೇಳಬೇಕಲ್ಲ? ಇಂಥ ಸರ್ಕಾರದಲ್ಲಿ ಹೇಗೆ ಆಯಿತು ಎಂದು ಹೇಳಬೇಕು.

ಶ್ರೀ ಎಂ. ಶ್ರೀನಿವಾಸ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ವಾಟಾಳರು ಘಾತನಾಡಿ ಭಾಷಣವನ್ನು ಹರಿದು ಹಾಕಿದರು ಎಂದು ಹೇಳಿದರು. ಸನ್ಮಾನ್ಯ ಮಂತ್ರಿಗಳು ದೆಹಲಿ ಅಧಿಕಾರಿಗಳಿಗೆ ಚಪ್ಪಲಿಯಲ್ಲಿ ಹೊಡೆಯುತ್ತೇನೆ ಎನ್ನುವ ಮಾತನ್ನು ಹೇಳಿದರು. ಆ ಮಂತ್ರಿಗಳನ್ನು ಸರ್ಕಾರ ಏನು ಮಾಡಿತು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್ : 27-191ರ ಕೆಳಗೆ ಈ ಮೋಷನ್ ಏಕೆ ತಂದೆವು ಎಂದರೆ ಇದನ್ನು ಏನಾದರೂ ಮಾಡಿ ಪ್ರಿವಿಲೇಜ್ ಕಮಿಟಿಗಾದರೂ ಕಳುಹಿಸಿ ಅಥವಾ ನಾನು ಅಡ್ಜಿಟಿ ಮಾಡಿ ಕೊಳ್ಳುವುದಿಲ್ಲ ಎಂದು ಹೇಳಿ ಅಥವಾ ಸದಸ್ಯರನ್ನು ಕೇಳಿ, ಮಾನ್ಯ ಸದಸ್ಯರು ನಾಗರಾಜು ಅವರು ಇದ್ದಾರೆ, ಮಹಾರಾಷ್ಟ್ರ ವಿಕೀಕರಣ ಸಮಿತಿಯವರು ಇದ್ದಾರೆ, ಅವರ ಅಭಿಪ್ರಾಯ ಕೇಳಿ, ತಾವು ಏನಾದರೂ ತೀರ್ಮಾನ ತೆಗೆದುಕೊಳ್ಳಿ. ಆದರೆ ಸರ್ಕಾರದ ಉದ್ದೇಶ ಏನೆಂದರೆ ಈ ಸದನದ ಗಂಭೀರತೆಯನ್ನು ನಾವು ಕಾಪಾಡಿಕೊಳ್ಳದೆ ಹೋದರೆ ಅವರು ಇವರು ಎಂದು ಹೇಳುವುದಿಲ್ಲ, ಬರಿ ಕೂಗುವುದು ಕೇಕೆ ಹೊಡೆಯುವುದು ಇದೇ ಆಗಬಾರದು.ಆದರೆ ಈ ಸದನ ಏಕೆ ಬೇಕು ಮಾನ್ಯ ಅಧ್ಯಕ್ಷರೆ? ಇದು ಒಂದೇ ಉದ್ದೇಶ. ಯಾರ ಮೇಲೆ ದ್ವೇಷವಿಲ್ಲ. ನಾಗರಾಜು ಅವರಿಗೆ ಅನುಭವವು ಇದೆ, ವಿಚಾರವು ಇದೆ, ಇಲ್ಲವೂ ಇದೆ. ಆದರೆ ಈ ರೀತಿ ವರ್ತನೆ ಸರಿಯಲ್ಲ, ಇನ್ನು ಮುಂದೆ ತಾವು ಇದಕ್ಕೆ ಅವಕಾಶ ಕೊಡಬಾರದು ಎಂಬು ಒಂದೇ ಉದ್ದೇಶದಿಂದ ಇದನ್ನು ತಂದಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ತಾವು ಅಪ್ಪಣೆ ಕೊಡುವುದಾದರೆ, ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಸತ್ಸಂ ಪ್ರದಾಯಗಳನ್ನು ಪಾಲನೆ ಮಾಡಿಕೊಂಡು ಹೋಗಬೇಕು ಈ ಸದನ ಅದೇ ರೀತಿಯಲ್ಲಿ ಗೌರವ ಪಡೆದುಕೊಳ್ಳಬೇಕೆಂದು

ಹೇಳಿದರು. ಅದರಲ್ಲಿ ಏನೂ ಭಿನ್ನಭಿಪ್ರಾಯಗಳು ಇಲ್ಲ. ಖಂಡಿತ ನಾವು ನಡೆದುಕೊಂಡು ಹೋಗೋಣ. ಒಂದು ಸಣ್ಣ ತಪ್ಪು, ಒಂದು ಸಣ್ಣ ಕೊರತೆ ಆಗದಂತೆ ಈ ಸದನವನ್ನು ನಡೆಸುವುದಕ್ಕೆ ನಾವು ಪೂರ್ಣ ಸಹಕಾರ ಕೊಡುತ್ತೇವೆ. ಆದರೆ ಯಾರಿಂದ ಈ ದರ್ಶನದ ಮಾತು? ಹೇಗೆ ನಿಮ್ಮ ಸರ್ಕಾರ ಪ್ರಾರಂಭವಾಯಿತು? ಏನೆಲ್ಲಾ ನಡೆದು ಹೋಯಿತು ಮೊದಲನೆಯ ದಿವಸ. ಇದನ್ನು ಚರ್ಚೆ ಮಾಡೋಣವೇ? ಗೇಟು ಏಕೆ ಮುರಿಯಿತು. ಚಪ್ಪಲಿ ತುರಾಟಗಳು ಏತಕ್ಕೆ ಆಯಿತು? ಯಾರೋ ಒಬ್ಬ ಜಿಲ್ಲಾಧಿಕಾರಿಗಳಿಗೆ ಸಚಿವ ಸಂಪುಟ ಸದಸ್ಯರೇ ಚಪ್ಪಲಿ ತೂರಾಟ ಮಾಡುತ್ತೀನೆಂದು ಹೇಳಿದ್ದುದು ಪತ್ರಿಕೆಗಳಲ್ಲಿ ಬಂದಿದೆ. ಇದು ಒಳಗೆ ನಡೆಯದೇ ಇರಬಹುದು ಹೊರಗೆ ನಡೆದಿದೆ.

ಅಧ್ಯಕ್ಷರು : ಸದನದ ವಿರೋಧಪಕ್ಷದ ನಾಯಕರಾಗಿರುವವರು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ನನಗೆ ಬಹಳ ಹೆಚ್ಚಿನ ಸಹಕಾರವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ ಸ್ವಾಮಿ, ಖಂಡಿತ.

ಅಧ್ಯಕ್ಷರು : ಎಲ್ಲಾ ವಿಷಯಗಳನ್ನು ನೀವು ಸವಿಸ್ತಾರವಾಗಿ ಪ್ರಸ್ತಾಪ ಮಾಡಿ, ಅವರು ಉತ್ತರ ಕೊಟ್ಟು ಎಲ್ಲಾ ಆಗಿದೆ. ಮತ್ತೆ ಮತ್ತೆ ಅದನ್ನೇ ತೆಗೆದುಕೊಳ್ಳತಕ್ಕ ಅವಶ್ಯಕತೆ ಇಲ್ಲ. ಇಲ್ಲಿ ಯಾವ ವಿಷಯ ಪ್ರಸ್ತುತ ನಮ್ಮ ಮುಂದೆ ಇದೆ, ಅದಕ್ಕೆ ಸಂಕ್ಷಿಪ್ತವಾಗಿ ನಾವು ನೇರವಾಗಿ ಕಾರ್ಯಕಲಾಪ ನಡೆಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೋಪಾಲಗೌಡರದು ಏತಕ್ಕೆ ಬಂತು ಸ್ವಾಮಿ? ಅಧ್ಯಕ್ಷರೇ, ನಾನು ಏನು ಹೇಳಲಿಕ್ಕೆ ಹೊರಟಿದ್ದೇನೆಂದರೆ ಇದನ್ನು ಖಂಡಿತ ಪಾಲನೆ ಮಾಡೋಣ, ಮಾಡಬೇಕೆಂದು ನನ್ನ ಅಪೇಕ್ಷೆ ಇರುವುದು. ನಿಮ್ಮಂತಹ ಹಿರಿಯರು ಅಲ್ಲಿ ಕುಳಿತಾಗ, ನಿಮ್ಮ ಒಂದು ಆದೇಶದಂತೆ ನಾವು ನಡೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಸಂಪ್ರದಾಯ ಪಾಲನೆ ಮಾಡುತ್ತೇವೆ. ಅವರ ಸಚಿವ ಸಂಪುಟ ಇದ್ದಾಗ, ಆ ಘಟನೆ ನಡೆದಾಗ ಈ ರೀತಿಯ ಆದೇಶವನ್ನು ಕೊಟ್ಟಿದ್ದಾರೆಂದು ಮಾನ್ಯ ಸಭಾನಾಯಕರು ಹೇಳಿದರೆ ಆಗ ನಾವು ಅದಕ್ಕೆ ತಲೆಬಾಗುತ್ತೇವೆ, ಅದಕ್ಕೆ ನಾವು ಗೌರವ ಕೊಡುತ್ತೇವೆ.

ಅಧ್ಯಕ್ಷರು : ಮಾನ್ಯ ಗೋಪಾಲ ಗೌಡರು ಇಂಥ ಒಂದು ಸನ್ನಿವೇಶದಲ್ಲಿ ಯಾವ ರೀತಿ ನಡೆದುಕೊಂಡರೆಂಬುದು ನಮಗೆ ಮಾರ್ಗದರ್ಶನವಾಗಬೇಕೆಂಬ ದೃಷ್ಟಿಯಿಂದ ಅವರು ಇಲ್ಲಿ ಹೇಳಿದರೇ ಹೊರತು, ಯಾವುದೋ ಒಂದು ಹಳೆಯ ಘಟನೆಯನ್ನು ಹೇಳಬೇಕೆಂದು ಅಲ್ಲ, ಮಾನ್ಯ ಗೋಪಾಲಗೌಡರು ಎಷ್ಟು ಎತ್ತರದ ವ್ಯಕ್ತಿ ಆಗಿದ್ದರೆಂಬುದನ್ನು ನಮಗೆ ಪರಿಚಯ ಮಾಡಿಕೊಡುವುದಕ್ಕೆ ನಮಗೆ ಈ ವಿಷಯವನ್ನು ಹೇಳಿದರು ಅಷ್ಟೆ.

SRI QUMURUL ISLAM : Mr. Speakr Sir, one of the Hon. Members Mr. Nage Gowda brought the privilege motion in this House making certain charges against another Hon.Member Mr.Vatal Nagaraj.

(ಮಾನ್ಯ ಕಮರುಲ್ ಇಸ್ಲಾಂ ಕನ್ನಡದಲ್ಲಿ ಮಾತನಾಡಬೇಕೆಂದು ಕೆಲವು ಸದಸ್ಯರು ಕೂಗಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಾನು ಇವರಿಗೆ ಕನ್ನಡವನ್ನು ಕಲಿಸುತ್ತಿದ್ದೇನೆ. ಇವರು ಮಧ್ಯೆ ಮಧ್ಯೆ ಒಂದೊಂದು ಪದ ಕನ್ನಡವನ್ನು ಉಪಯೋಗಿಸುತ್ತಾರೆ. ಕನ್ನಡದಲ್ಲೇ ನೀವು ಮಾತನಾಡಿ ಎಂದು ನಾನು ಹೇಳಿದರೂ ಕೂಡ ಅವರು ಕನ್ನಡದಲ್ಲಿ ಮಾತನಾಡಲು ಹೋಗಿ ಬೇರೆ ಇನ್ನೇನಾದರೂ ಮಾತನಾಡಿಬಿಟ್ಟಾರೆಂಬ ಭಯ ನನಗಿದೆ.

ಶ್ರೀ ಖಮರುಲ್ ಇಸ್ಲಾಂ : ಇದು ಬಹಳ ಸೀರಿಯಸ್ ವಿಷಯ. ಆದ್ದರಿಂದ ನಾನು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದೇನೆ. So, the Hon. Member Mr. Nage Gowda has brought he privilege motion in this House against another Hon. Member Mr. Vatal Nagaraj, Sir, it is a fact that the dignity of the House has to be maintained. But, there are cetrtain established traditions. What traditions, I will tell you. When I enetered in this House in 1978, I am seeing the MES Members whether they are 3 or 4 - are coming in their particular dress and at the time of the joint session while Hon. Governor is addressing, they are walking out and they are making the issues and all that. It is an established fact. If you go through the paper, what has happened in Kerala? What has happened in Tamil Nadu? I think they have done and gone to the maximum extent in violation of the rules. Now Hon. Deputy Chief Minister has very nicely narrated a story or the incident which has occured during the year 1965. When I was the Member in this House during the year 1965. When I was the Member in this House during the year 1981, I know late Gundu Rao was the Chief Minister, the same question of privilege and all came. Then our Hon.Deputy Chief Minister Mr. J.H. Patel, I remember, was sitting on the chair where Mr. Jeevaraj Alva was sitting. When asked, 'Is it the way of behaving in this House?' He said 'Yes. I am the member. If the House permits, yes, I can sit like this.' He sat and he started speaking.

(At this stage Hon. Member demonstrated the posture.)

This, I have shown because the Members should know the incident.

MR. SPEAKER : Mr. Qumurul Islam, I am sorry. I am myself there in the Chair. I will not permit such demonstrations.

SRI QUMURUL ISLAM : I am sorry, Sir.

MR. SPEAKER : I will request you kindly to address the chair and not the House. Please address me.

SRI QUMURUL ISLAM : I am sorry. I am hurt. I am sorry. I am very much sorry, if I have shown the action. It is a fact. Some of the members are there. It is for the respect of the House, for the dignity of the House, because Members should not forget. Members should not forget that, when they just go to the other side. The past history is there. Now, I wanted to raise a serious question. In this we are all witness on 20th. Certain charges have been made. It is a fact that Sri Vatal Nagaraj was also reading. I said 'Sir, for the first time two addresses we are hearing.' It is a fact. It has appeared in the paper and all that. He read it and in the last also very nicely he said 'I am not derespecting the Hon. Governor.' and all that. All these things we have all heard. In this what is the charge made? It is that he has rubbed the Governor's Address by the leg. In this House I was sitting by

this side and Hon.Speaker has seen. Can any Member get up and say here that the charge that he has rubbed the Governor's Address with the leg is true? will the Hon.Member say? When we were all sitting, he is making false charges. Other charges are ture. Other charges are true. But, as far as this charge is...

SRI K.N. NAGE GOWDA : I am a point of Order.

ಅಧ್ಯಕ್ಷರು :ಮಾನ್ಯ ನಾಗೇಗೌಡರು ಕ್ರಿಯಾಲೋಪವೆತ್ತಿದ್ದಾರೆ..

ಶ್ರೀ ಹೆಚ್.ಶಿವಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ನಾಗೇಗೌಡರು ಪ್ರಿವಿಲೇಜ್ ಮೋಷನ್‌ನ್ನು ಮೂವ್ ಮಾಡಿದ ನಂತರ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟು ಅವರು ವಿವರಣೆಯನ್ನು ಕೊಟ್ಟನಂತರ ನಾನು ಈ ರೀತಿ ಮಾಡಿಲ್ಲವೆಂದು ಹೇಳಿದಮೇಲೆ ಬೇರೆ ಸದಸ್ಯರು ಅವರನ್ನು ಡಿಫೆಂಡ್ ಮಾಡುವುದಕ್ಕೆ ಮಾತನಾಡಿದರು. ನಾವು ಅವರಿಗೆ ಇನ್ನೂ ಅವಕಾಶವನ್ನೇ ಕೊಡದೇ ಇರುವಾಗ ಅವರ ಪರವಾಗಿ ಬೇರೆ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಕೊಡತಕ್ಕದ್ದು ಸರಿಯಲ್ಲ, ಅವರನ್ನು ಡಿಫೆಂಡ್ ಮಾಡಿಕೊಳ್ಳತಕ್ಕದ್ದೂ ಸರಿಯಲ್ಲ, Opportunity must first be given to the Member against whom allegations have been made in the form of motion. If he does not agree, at least then the other Members can rise and defend.

SRI QUMURUL ISLAM : I am speaking with the permission of the Chair.

MR. SPEAKER : It is alright.

ಶ್ರೀ ಕೆ.ಎನ್. ನಾಗೇಗೌಡ : ನಾನು ತಮಗೆ ಮೊದಲೇ ಹೇಳಿದೆ. ನಾವು ಯಾವ ಮಾನ್ಯ ಸದಸ್ಯರಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ತಂದಿದ್ದೇವೋ ಅವರು ಸದನದಲ್ಲೇ ಇರುವುದರಿಂದ, ಅವರು ಡಿಫೆಂಡ್ ಮಾಡಿಕೊಳ್ಳತಕ್ಕ ಅವಕಾಶ ಇರುವಾಗ, ಬೇರೆಯವರು ಅವರ ಪರವಾಗಿ ಮಾತನಾಡತಕ್ಕದ್ದು ಈ ಸದನದ ನಿಯಮಾವಳಿಗೆ ವಿರುದ್ಧವಾದುದು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎರಡನೆಯದಾಗಿ, ನಡೆದಂಥ ಘಟನೆಯನ್ನು ನಮ್ಮ ನೋಟೀಸ್‌ನಲ್ಲಿ ಏನು ತಿಳಿಸಿದ್ದೇವೆ ಅದು ಸತ್ಯ ಎಂಬುದನ್ನು ಅವರು ಸುಳ್ಳು ಎಂದು ಹೇಳುವುದಕ್ಕೆ ಬೇಕಾಗಿರತಕ್ಕದ್ದು ಏನೆಂದರೆ, ಸ್ಪೆಷಲ್ ಕಮಿಟಿ. ನಮ್ಮ ಉದ್ದೇಶವೇನೆಂದರೆ, ತಾವು ಒಂದು ಸಮಿತಿಯನ್ನು ರಚನೆ ಮಾಡಿ. ಅವರು ಮಾಡಿರತಕ್ಕದ್ದು ನಿಜವೋ ಅಲ್ಲವೋ ಎಂಬುದನ್ನು ಆ ಸಮಿತಿಯ ಮುಂದೆ ನಾವು ಹೇಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆಯವರು ಮಾತನಾಡಬಾರದೆಂದು ಏನೂ ಇಲ್ಲ, ಈ ಪ್ರೊಸೀಜರ್ ಬಗ್ಗೆಯೇ ನಾವು ಮಾತನಾಡುತ್ತಿದ್ದೇವೆ. ಡಿಫೆಂಡ್ ಮಾಡಿಕೊಳ್ಳತಕ್ಕದ್ದು ಸರಿಯೋ, ತಪ್ಪೋ ಎಂದು ಯಾರೂ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ. ಈ ಸಮಸ್ಯೆ ಏತಕ್ಕೆ ಬಂತು ಎಂದರೆ, ಹೊಸದಾಗಿ ರೂಲ್ 27ನ್ನು ಅಳವಡಿಸಿಕೊಂಡಿದ್ದೇವೆ. ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ರೂಲ್ 27 ಇರಲಿಲ್ಲ, ಮಾನ್ಯ ಮೊಯ್ನಿಯವರು ಹೇಳಿದಂತೆ ನಿಯಮ

324ರ ಪ್ರಕಾರ ಮಾನ್ಯ ಸದಸ್ಯರು ಈ ಸದನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ಹೇಳಿದೆ. ಮಾನ್ಯ ನಾಗೇಗೌಡರು ನಿಯಮ 191ರ ಪ್ರಕಾರ ಪ್ರಿವಿಲೇಜ್ ಮೋಷನ್‌ನನ್ನು ತಂದಿದ್ದಾರೆ. ನಿಯಮ 27ನ್ನು ಹೊಸದಾಗಿ ಅಳವಡಿಸಿಕೊಂಡಿರುವುದರಿಂದಾಗಿ ಇವತ್ತು ಈ ಸಮಸ್ಯೆ ಉದ್ಭವಿಸಿದೆ. ಈ ಪ್ರೊಸೀಜರ್‌ನ್ನು ಯಾವ ರೀತಿ ಅಡಾಪ್ಟ್ ಮಾಡಬೇಕೆಂಬ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಈ ದಿಸೆಯಲ್ಲಿ ಒಬ್ಬರು ಇದನ್ನು ಸರಿ ಎಂದು ಹೇಳುತ್ತಾರೆ, ಇನ್ನೊಬ್ಬರು ಇದನ್ನು ತಪ್ಪು ಎಂದು ಹೇಳುತ್ತಾರೆ. ಇದನ್ನು ನೋಡಿದ ಮೇಲೆ ನೀವು ಡಿಫೆಂಡ್ ಮಾಡುವುದಕ್ಕೆ ಏತಕ್ಕೆ ನಿಂತಿರಿ ಎಂದು ಅವರು ಹೇಳತಕ್ಕದ್ದು ಸರಿಯಲ್ಲ, ಆ ಕಡೆಯವರೂ ಕೂಡ ಅದನ್ನೇ ವಾದ ಮಾಡುತ್ತಿದ್ದಾರೆ. ಈ ಕಡೆಯವರೂ ಇದನ್ನೇ ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಈ 3 ರೂಲ್ಸ್ ಆಫ್ ಪ್ರೊಸೀಜರ್ ಏನಿವೆ ಇವುಗಳ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ಆದ್ದರಿಂದ ನಮ್ಮ ವಿನಂತಿ ಏನೆಂದರೆ, ರೂಲ್ 27, 191 ಮತ್ತು 324 ಈ ಮೂರು ನಿಯಮಗಳ ಬಗ್ಗೆ ಗಮನಹರಿಸಿ ಒಂದು ನಿರ್ಣಯವನ್ನು ತಾವೇ ಕೈಗೊಳ್ಳಬೇಕು. ತಾವು ಎಂ.ಇ.ಎಸ್. ನವರನ್ನೂ ವಾಟಾಳ್ ನಾಗರಾಜ್‌ರವರನ್ನ ಕರೆಯಿಸಿಕೊಳ್ಳಿ. ಮಾನ್ಯ ನಾಗೇಗೌಡರ ಉದ್ದೇಶ ಏನೆಂದು ನನಗೆ ಗೊತ್ತಾಗಲಿಲ್ಲ, ಈ ಸದನದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಒಬ್ಬರನ್ನೇ ಹೀಗೆ ಮಾಡಿದ್ದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಇದಕ್ಕೆ ಕೌಂಟರ್ ಆಗಿ ಎಂ.ಇ.ಎಸ್. ನವರು ತಮ್ಮ ಸ್ಥಾನದಲ್ಲಿ ನಿಂತುಕೊಂಡು ಪ್ರೊಟೆಸ್ಟ್ ಮಾಡುವುದನ್ನು ಬಿಟ್ಟು, ಪ್ರಚೋದನೆ ಮಾಡುವುದಕ್ಕಾಗಿ ಅವರ ಎದುರಿಗೆ ಬಂದು ಸ್ಲೋಗನ್ ಕೂಗಿಕೊಂಡು ಹೋದರು. ಇದನ್ನು ಗಮನದಲ್ಲಿಟ್ಟುಕೊಂಡು ತಾವು ಅವರಿಗೆ ಬುದ್ಧಿವಾದವನ್ನು ಹೇಳುವುದಾದರೆ ಎರಡೂ ಕಡೆಯವರನ್ನು ಕರೆಸಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಏಕಪಕ್ಷೀಯವಾಗಿ ವಾಟಾಳ್ ನಾಗರಾಜ್‌ರವರೇ ಮಾಡಿದ್ದಾರೆಂದು ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ.

SRI QUMURUL ISLAM : My only submission is that for all of us the repect of this House is very important. My suggestion in this House is very important. My suggestion in this House Through you Sir, is that the Hon. Member should withdraw this motion moved and your honour can call a meeting of all party leaders. where all the party leaders will be there. For us the respect of this House is very important. We will see that the respect of the House is maintained. Certain compromise is to be adopted and this is the best solution at this juncture in my opinion which I have submitted to you.

ಶ್ರೀ ವಾಟಾಳ್ ನಾಗಾರಾಜ್ : ಈಗ ಸಮಯ ಎಂದು ಗಂಟೆ ಆಗಿದೆ. ಆದ್ದರಿಂದ ಊಟ ಆದಮೇಲೆ ತೆಗೆದುಕೊಳ್ಳೋಣವೆಂದು ನನ್ನ ಸಲಹೆ.

ಅಧ್ಯಕ್ಷರು : ನಿಮ್ಮನ್ನು ನೋಡಿದರೆ ನನಗೆ ಹೊಟ್ಟೆ ತುಂಬುತ್ತದೆ. ಅರ್ಧ ಗಂಟೆಯ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮೂರು ಗಂಟೆಗೆ ತೆಗೆದುಕೊಳ್ಳೋಣ. ಊಟ ಮಾಡಿ ಬಂದರೆ ಭಾಷಣ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಈಗ ಸಭೆ ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರುತ್ತದೆ.

(ಸದನವು 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು)

(ಸಭೆಯು 3-10 ನಿಮಿಷಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು : ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದರು

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವು ಒಂದು ನಿಮಿಷಕ್ಕೆ 45-50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಆದರೆ ಮಾನ್ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಈ ಸದನದ ಸಮಯವನ್ನು ಅವರೇ ತೆಗೆದುಕೊಂಡು ಬೇರೆಯವರಿಗೆ ಅವಕಾಶ ಕೊಡದಂತೆ ಆಗಿದೆ. ನಾವೆಲ್ಲಾ ಹೊಸ ಸದಸ್ಯರು ಇಲ್ಲಿ ಬಂದಿದ್ದೇವೆ ನಮಗೂ ಆಸೆ ಇದೆ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು, ನಮಗೂ ಅವಕಾಶ ಮಾಡಿ ಕೊಡಿ ಎಂದು ನಮ್ಮ ಮನವಿ. ಒಂದು ದಿನಕ್ಕೆ ನಾವು ಸುಮಾರು 1 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಾವು ರಾಜ್ಯದ ಜನರ ಇಷ್ಟೊಂದು ಹಣವನ್ನು ಖರ್ಚು ಮಾಡಿ, ನೀವು ಏನು ಕೆಲಸ ಮಾಡಿದಿರಿ ಅಂತಜನ ನಮ್ಮನ್ನು ಕೇಳಿದರೆ ನಾವು ಏನು ಕೆಲಸ ಮಾಡಿದಿರಿ ಅಂತಜನ ನಮ್ಮನ್ನು ಕೇಳಿದರೆ ನಾವು ಏನು ಉತ್ತರ ಹೇಳಬೇಕು? ಇದನ್ನು ತಾವು ದಯಮಾಡಿ ಯೋಚನೆ ಮಾಡಿ.

ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ ದಯಮಾಡಿ ಕುಳಿತುಕೊಳ್ಳಿ ನಾನು ಓದುತ್ತೇನೆ.

ಸರ್ಕಾರದವರು ಜನತಾ ಶಿಕ್ಷಣ ಎನ್ನುವ ಶೀರ್ಷಿಕೆ ಅಡಿಯಲ್ಲಿ ಒಂದು ವಿಡೀಯೋ ಚಿತ್ರೀಕರಣವನ್ನು ಮಾಡಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬಿಡುಗಡೆ ಮಾಡಲು ಉದ್ದೇಶಿಸಿದ್ದು, ಜನತಾ ಶಿಕ್ಷಣದ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಎರಡು ಸದನವನ್ನು ಉದ್ದೇಶಿಸಿ ಮಾಡಿದ ಭಾಷಣ, ವಂದನಾ ನಿರ್ಣಯದ ಮೇಲೆ ಸದಸ್ಯರು ಚರ್ಚೆ ಪ್ರಾರಂಭಿಸುವುದು ಹಾಗೂ ಅದನ್ನು ಅನುಮೋದಿಸುವುದು, ಸರ್ಕಾರದವರು ಉತ್ತರ ನೀಡುವುದು, ಅದೇ ರೀತಿ ಅರ್ಥ ಸಚಿವರು ವಿಧಾನ ಸಭೆಗೆ ಆಯವ್ಯಯವನ್ನು ಮಂಡಿಸುವುದು, ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ವಿರೋಧ ಪಕ್ಷದ ನಾಯಕರು ಪ್ರಾರಂಭಿಸುವುದು ಹಾಗೂ ಸಚಿವರು ಉತ್ತರವನ್ನು ನೀಡುವುದೆಲ್ಲವನ್ನೂ ಸದನದ ಒಳಗಡೆ ಚಿತ್ರೀಕರಿಸಲು ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ಹಾಗೂ ಈ ಬಗ್ಗೆ ನನಗೆ ಒಂದು ಕಾಗದ ಬರೆದಿದ್ದು ಈ ಚಿತ್ರೀಕರಣ ಮಾಡಲು ಅನುಮತಿಸಿದ್ದೇನೆ.

ಆದಕಾರಣ, ಮಾನ್ಯ ಸದಸ್ಯರುಗಳೆಲ್ಲರೂ ಈ ಬಗ್ಗೆ ಸಹಕರಿಸಬೇಕೆಂದು ವಿನಂತಿಸುತ್ತೇನೆ.

(ಪ್ರಕಟಣೆಯನ್ನು ಲಗತ್ತಿಸಲಾಗಿದೆ)

ಹಕ್ಕುಚ್ಯುತಿ ನಿರ್ಣಯ(ಮುಂದುವರೆದದ್ದು)

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ಸೂಕ್ಷ್ಮವಾದ ವಿಷಯವನ್ನು ಮಾನ್ಯ ಸದಸ್ಯರಾದ ನಾಗೇಗೌಡರು ತಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಇದು ಹೆಸರಿಗೆ ಮಾತ್ರ ಶ್ರೀ ವಾಟಾಳ್ ನಾಗರಾಜ್‌ರವರು ನಿನ್ನೆಯ ದಿವಸ ಸದನದಲ್ಲಿ ನಡೆದಿರತಕ್ಕಂಥ ವಿಷಯದ ಬಗ್ಗೆ ಮಾನ್ಯ ನಾಗೇಗೌಡರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಬಹಳ ಸೂಕ್ಷ್ಮವಾದ ವಿಷಯ ಅಡಗಿದೆ ಅಂತ ನಾನು ಅಂದುಕೊಂಡಿದ್ದೇನೆ. ಮಾನ್ಯ ಸದಸ್ಯರು ಈ ಸದನದ